# ಕರ್ನಾಟಕ ಸರ್ಕಾರ
# ಸಮಾಜ ಕಲ್ಯಾಣ ಇಲಾಖೆ

## ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ ಅನುಷ್ಠಾನದ ಬಗ್ಗೆ 2016-17 ನೇ ಸಾಲಿನ ಆರ್ಥಿಕ ವರ್ಷದ ವಾರ್ಷಿಕ ವರದಿ

ಕರ್ನಾಟಕ ಅನುಸೂಚಿತ ಜಾತಿಗಳ ಉಪ ಯೋಜನೆ ಮತ್ತು ಬುಡಕಟ್ಟು ಉಪ ಯೋಜನೆ (ಯೋಜನೆ ರೂಪಿಸುವುದು, ಆರ್ಥಿಕ ಸಂಪನ್ಮೂಲಗಳ ಹಂಚಿಕೆ ಮತ್ತು ಬಳಕೆ) ಅಧಿನಿಯಮ 2013 ವಿಧೇಯಕವನ್ನು ಡಿಸೆಂಬರ್ 2013 ರಲ್ಲಿ ಜರುಗಿದ ಬೆಳಗಾವಿ ಅಧಿವೇಶನದಲ್ಲಿ ವಿಧಾನ ಮಂಡಲದಿಂದ ಅನುಮೋದನೆ ಪಡೆಯಲಾಗಿದೆ. ಸರ್ಕಾರದ ಅಧಿಸೂಚನೆ ಸಂಖ್ಯೆ: ಸಕಇ 75 ಎಸ್ ಎಲ್ ಪಿ 2013 ಮೂಲಕ ದಿನಾಂಕ: 20-03-2014 ರನ್ವಯ ಸದರಿ ಕಾಯ್ದೆ ಜಾರಿಗೆ ಬಂದಿರುತ್ತದೆ. ಸದರಿ ಕಾಯ್ದೆ ಜಾರಿಗೆ ಬಂದ ನಂತರ ಒಟ್ಟು ಅಭಿವೃದ್ಧಿ ಕಾರ್ಯಕ್ರಮಗಳಿಗೆ ನಿಗಧಿಪಡಿಸಿದ ಆಯವ್ಯಯದಿಂದ, ಪ.ಜಾತಿ ಮತ್ತು ಪ.ಪಂಗಡದ ಜನಸಂಖ್ಯೆ ಆಧಾರದ ಮೇಲೆ SCSP/ TSP ಯೋಜನೆಗಳಿಗೆ ಅನುದಾನ ನಿಗಧಿಪಡಿಸಲಾಗುತ್ತಿದೆ. 2011 ರ ಜನಗಣತಿಯಂತೆ ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ (6.10 ಕೋಟಿ) ಪ.ಜಾತಿ ಜನಸಂಖ್ಯೆ ಶೇ.17.15 (1.04 ಕೋಟಿ ಜನ) ಹಾಗೂ ಪ.ಪಂ ಜನಸಂಖ್ಯೆ ಶೇ.6.95 (42.00 ಲಕ್ಷ) ಇರುತ್ತದೆ.

ಸದರಿ ಕಾಯ್ದೆಯ ಸೆಕ್ಷನ್ (5) ರ ಪ್ರಕಾರ ಸಮಾಜ ಕಲ್ಯಾಣ ಇಲಾಖೆಯು ನೋಡಲ್ ಇಲಾಖೆಯಾಗಿ ಕಾರ್ಯ ನಿರ್ವಹಿಸುತ್ತದೆ. 2016-17 ನೇ ಸಾಲಿನ ಆಯವ್ಯಯದಲ್ಲಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಹಂಚಿಕೆಯಾದ ಅನುದಾನಕ್ಕೆ ಅನುಗುಣವಾಗಿ ವಿವಿಧ ಕಾರ್ಯಕ್ರಮಗಳಿಗೆ ಆಯಾ ಇಲಾಖೆಗಳು ಕ್ರಿಯಾ ಯೋಜನೆಗಳನ್ನು ರೂಪಿಸಿ ಮಾನ್ಯ ಸಮಾಜ ಕಲ್ಯಾಣ ಸಚಿವರ ಅಧ್ಯಕ್ಷತೆಯಲ್ಲಿರುವ ನೊಡಲ್ ಏಜೆನ್ಸಿಗೆ ಸಲ್ಲಿಸಿರುತ್ತಾರೆ. ಅದರಂತೆ ಕ್ರಿಯಾ ಯೋಜನೆಗಳನ್ನು ಪರಿಶೀಲಿಸಿ, ಮಾನ್ಯ ಮುಖ್ಯಮಂತ್ರಿಗಳ ಅಧ್ಯಕ್ಷತೆಯಲ್ಲಿರುವ ರಾಜ್ಯ ಅನುಸೂಚಿತ ಜಾತಿ/ ಅನುಸೂಚಿತ ಪಂಗಡಗಳ ಅಭಿವೃದ್ಧಿ ಪರಿಷತ್ತಿಗೆ ಶಿಫಾರಸ್ಸು ಮಾಡಲಾಗುತ್ತದೆ. ಅಂತಿಮವಾಗಿ ದಿನಾಂಕ:15-07-2016 ರಂದು ಅಭಿವೃದ್ಧಿ ಇಲಾಖೆಗಳ ಕ್ರಿಯಾ ಯೋಜನೆಗಳನ್ನು ಅನುಮೋದಿಸಲಾಗಿದೆ. ಸದರಿ ಅನುಮೋದನೆಯಂತೆ ಕಾರ್ಯಕ್ರಮಗಳನ್ನು ಆಯಾ ಇಲಾಖೆಗಳು ಅನುಷ್ಠಾನಗೊಳಿಸಿರುತ್ತಾರೆ.

### 2016-17 ನೇ ಸಾಲಿನ SCSP/ TSP ಯೋಜನೆಯಡಿಯಲ್ಲಿ ಸಾಧಿಸಿದ ಪ್ರಗತಿಯ ಸಾರಾಂಶ

(ರೂ. ಕೋಟಿಗಳಲ್ಲಿ)

| ಉಪ ಯೋಜನೆ | ನಿಗದಿಪಡಿಸಿದ ಅನುದಾನ | ಬಿಡುಗಡೆ | ಖರ್ಚು | ನಿಗದಿಗೆ ಶೇಕಡ | ಬಿಡುಗಡೆಗೆ ಶೇಕಡ |
|---|---|---|---|---|---|
| SCSP | 14408.10 | 139965.25 | 13315.15 | 92.41 | 95 |
| TSP | 5632.19 | 5423.19 | 5150.10 | 91.44 | 95 |
| **ಒಟ್ಟು** | **20040.29** | **145388.44** | **18465.25** | **91** | **95** |

ಮೇಲ್ಕಂಡಂತೆ 2016-17 ನೇ ಸಾಲಿನಲ್ಲಿ ಒಟ್ಟಾರೆ ಶೇ.91 ರಷ್ಟು ಪ್ರಗತಿಯನ್ನು ಸಾಧಿಸಲಾಗಿದೆ.

## 2016-17 ನೇ ಸಾಲಿನ ಆಯವ್ಯಯದಲ್ಲಿ ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ಯೋಜನೆಯಡಿ ವಿವಿಧ ಅಭಿವೃದ್ಧಿ ಇಲಾಖೆಗಳಿಗೆ ಒದಗಿಸಿದ ಹಾಗೂ ವೆಚ್ಚಮಾಡಿದ ಅನುದಾನದ ವಿವರ

(ರೂ. ಕೋಟಿಗಳಲ್ಲಿ)

| ಕ್ರ. ಸಂ | ಇಲಾಖೆಗಳು | SCSP | | | | TSP | | | |
|---|---|---|---|---|---|---|---|---|---|
| | | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ |
| 1 | ಕೃಷಿ | 461.82 | 455.72 | 453.88 | 98 | 217.96 | 190.14 | 188.85 | 87 |
| 2 | ತೋಟಗಾರಿಕೆ | 96.49 | 92.95 | 90.37 | 94 | 41.64 | 39.81 | 38.52 | 93 |
| 3 | ರೇಷ್ಮೆ | 27.90 | 27.90 | 27.79 | 100 | 12.93 | 12.93 | 10.88 | 84 |
| 4 | ಪಶುಸಂಗೋಪನೆ | 151.47 | 146.50 | 139.43 | 92 | 59.25 | 57.15 | 54.07 | 91 |
| 5 | ಮೀನುಗಾರಿಕೆ | 24.90 | 24.59 | 24.51 | 98 | 8.63 | 8.48 | 8.43 | 98 |
| 6 | ಸಾರಿಗೆ | 5.75 | 5.75 | 5.75 | 100 | 2.36 | 2.36 | 2.36 | 100 |
| 7 | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ | 2042.56 | 1893.42 | 1833.11 | 90 | 978.82 | 963.51 | 870.32 | 89 |
| 8 | ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ | 50.62 | 50.62 | 50.62 | 100 | 40.04 | 40.04 | 40.04 | 100 |
| 9 | ಸಹಕಾರ | 93.57 | 93.57 | 92.83 | 99 | 67.28 | 70.72 | 54.82 | 81 |
| 10 | ಸಮಾಜ ಕಲ್ಯಾಣ/ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ | 3481.93 | 3406.08 | 3279.15 | 94 | 1089.45 | 1088.34 | 1022.61 | 94 |
| 11 | ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ | 318.32 | 318.20 | 300.34 | 94 | 125.51 | 125.51 | 117.40 | 94 |
| 12 | ವಾರ್ತಾ | 4.59 | 4.59 | 4.14 | 90 | 0.66 | 0.55 | 0.34 | 52 |
| 13 | ಪ್ರವಾಸೋದ್ಯಮ | 20.65 | 20.65 | 20.14 | 98 | 6.48 | 6.48 | 6.27 | 97 |
| 14 | ಯುವಜನ ಸೇವೆಗಳು | 17.97 | 17.07 | 17.06 | 95 | 7.41 | 6.93 | 6.93 | 94 |
| 15 | ಕಂದಾಯ | 461.58 | 461.58 | 460.06 | 100 | 113.66 | 113.66 | 112.72 | 99 |
| 16 | ಐ.ಟಿ – ಬಿ.ಟಿ | 5.80 | 5.80 | 5.80 | 100 | 2.32 | 2.32 | 2.32 | 100 |
| 17 | ವಸತಿ | 1623.81 | 1623.81 | 1576.58 | 97 | 423.84 | 425.84 | 423.84 | 100 |
| 18 | ಉನ್ನತ ಶಿಕ್ಷಣ | 257.86 | 244.69 | 238.73 | 93 | 98.99 | 96.29 | 94.28 | 95 |
| 19 | ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ | 849.75 | 813.28 | 801.68 | 94 | 340.67 | 330.85 | 320.19 | 94 |
| 20 | ಕೈಮಗ್ಗ ಮತ್ತು ಜವಳಿ | 57.45 | 57.45 | 57.45 | 100 | 23.84 | 23.84 | 23.84 | 100 |
| 21 | ಭಾರಿ ಮತ್ತು ಮಧ್ಯಮ ಕೈಗಾರಿಕೆ | 79.40 | 79.40 | 79.40 | 100 | 29.26 | 29.26 | 29.26 | 100 |
| 22 | ಸಣ್ಣ ಕೈಗಾರಿಕೆ | 22.37 | 22.37 | 22.19 | 99 | 9.42 | 9.46 | 9.30 | 99 |
| 23 | ನಗರಾಭಿವೃದ್ಧಿ | 544.86 | 539.64 | 528.54 | 97 | 192.33 | 191.07 | 187.76 | 98 |

| ಕ್ರ. ಸಂ | ಇಲಾಖೆಗಳು | SCSP | | | | TSP | | | |
|---|---|---|---|---|---|---|---|---|---|
| | | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ | ಹಂಚಿಕೆ | ಬಿಡುಗಡೆ | ಖರ್ಚು | % ಶೇಕಡ ವೆಚ್ಚ |
| 24 | ಲೋಕೋಪಯೋಗಿ | 724.86 | 664.45 | 536.80 | 74 | 414.80 | 379.87 | 342.29 | 83 |
| 25 | ಭಾರಿ ನೀರಾವರಿ | 1528.07 | 1528.07 | 1522.18 | 100 | 766.75 | 766.75 | 766.75 | 100 |
| 26 | ಸಣ್ಣ ನೀರಾವರಿ | 241.24 | 222.25 | 23.64 | 10 | 102.06 | 19.20 | 9.12 | 9 |
| 27 | ವೈದ್ಯಕೀಯ ಶಿಕ್ಷಣ | 30.25 | 30.25 | 30.13 | 100 | 10.04 | 10.04 | 9.80 | 98 |
| 28 | ಆರೋಗ್ಯ | 585.05 | 522.05 | 518.30 | 89 | 196.84 | 165.55 | 158.87 | 81 |
| 29 | ಕಾರ್ಮಿಕ | 111.79 | 110.99 | 98.28 | 88 | 47.60 | 47.21 | 42.48 | 89 |
| 30 | ಇಂಧನ | 146.62 | 146.62 | 146.62 | 100 | 51.60 | 51.60 | 51.60 | 100 |
| 31 | ಕನ್ನಡ ಮತ್ತು ಸಂಸ್ಕೃತಿ | 47.14 | 47.14 | 44.67 | 95 | 21.26 | 21.17 | 18.88 | 89 |
| 32 | ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ | 290.90 | 287.04 | 284.98 | 98 | 128.16 | 126.53 | 124.96 | 98 |
| 33 | ಕಾನೂನು | 0.76 | 0.76 | 0.00 | 0 | 0.33 | 0.33 | 0.00 | 0 |
| | **ಒಟ್ಟು** | **14408.10** | **13965.25** | **13315.15** | **92** | **5632.19** | **5423.79** | **5150.10** | **91** |

| ಕ್ರ.ಸಂ | ವಿವರ | ಇಲಾಖೆಗಳು |
|---|---|---|
| 1 | ಶೇ.100 ರಷ್ಟು ವೆಚ್ಚ ಮಾಡಿದ ಇಲಾಖೆಗಳು – 10 | ರೇಷ್ಮೆ , ಸಾರಿಗೆ, ಅರಣ್ಯ, ಕಂದಾಯ, ಮಾಹಿತಿ ತಂತ್ರಜ್ಞಾನ, ಕೈಮಗ್ಗ ಮತ್ತು ಜವಳಿ, ಭಾರಿ ಮತ್ತು ಮಧ್ಯಮ ಕೈಗಾರಿಕೆ, ಭಾರಿ ನೀರಾವರಿ, ವೈದ್ಯಕೀಯ ಶಿಕ್ಷಣ ಮತ್ತು ಇಂಧನ |
| 2 | ಶೇ.70 ರಿಂದ ಶೇ.99 ರವರೆಗೆ ವೆಚ್ಚ ಮಾಡಿದ ಇಲಾಖೆಗಳು–21 | ಕೃಷಿ, ತೋಟಗಾರಿಕೆ, ಪಶುಸಂಗೋಪನೆ, ಮೀನುಗಾರಿಕೆ, ಆರ್.ಡಿ.ಪಿ.ಆರ್. ಸಹಕಾರ, ಸಮಾಜ ಕಲ್ಯಾಣ & ಪರಿಶಿಷ್ಟ ವರ್ಗಗಳ ಕಲ್ಯಾಣ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಾರ್ತಾ, ಪ್ರವಾಸೋದ್ಯಮ, ಯುವಜನ ಸೇವೆ, ವಸತಿ, ಉನ್ನತ ಶಿಕ್ಷಣ, ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ, ಸಣ್ಣ ಕೈಗಾರಿಕೆ, ನಗರಾಭಿವೃದ್ಧಿ, ಲೋಕೋಪಯೋಗಿ, ಆರೋಗ್ಯ, ಕಾರ್ಮಿಕ, ಕನ್ನಡ ಮತ್ತು ಸಂಸ್ಕೃತಿ ಹಾಗೂ ಯೋಜನಾ |
| 3 | ಶೇ.50 ಕ್ಕಿಂತ ಕಡಿಮೆ ವೆಚ್ಚ ಮಾಡಿದ ಇಲಾಖೆಗಳು– 2 | ಸಣ್ಣ ನೀರಾವರಿ, ಕಾನೂನು |

**ಈ ಕೆಳಕಂಡ ಇಲಾಖೆಗಳಲ್ಲಿ ಕೆಲವು ಮೊತ್ತ ಕೇಂದ್ರದಿಂದ ಬಿಡುಗಡೆಯಾಗಿರುವುದಿಲ್ಲ.**

- ಆರೋಗ್ಯ ಇಲಾಖೆಯಲ್ಲಿ ರಾಷ್ಟ್ರೀಯ ಆರೋಗ್ಯ ಅಭಿಯಾನ ಕಾರ್ಯಕ್ರಮದಡಿ ರೂ.95.13 ಕೋಟಿ ಕೇಂದ್ರದಿಂದ ಬಿಡುಗಡೆಯಾಗಿರುವುದಿಲ್ಲ.
- ಉನ್ನತ ಶಿಕ್ಷಣ ಇಲಾಖೆಯಲ್ಲಿ ರಾಷ್ಟ್ರೀಯ ಉಚ್ಚತರ ಶಿಕ್ಷಾ ಅಭಿಯಾನ (RUSA) ಯೋಜನೆಯಡಿಯಲ್ಲಿ ಕೇಂದ್ರ ಸರ್ಕಾರದಿಂದ ರೂ.14.51 ಕೋಟಿ ಬಿಡುಗಡೆಯಾಗಿರುವುದಿಲ್ಲ.

ಮೇಲ್ಕಂಡ ಕಾಯ್ದೆಯಡಿಯಲ್ಲಿ SCSP/ TSP ಯೋಜನೆಯಡಿಯಲ್ಲಿ ಬಿಡುಗಡೆಯಾಗಿ ವೆಚ್ಚವಾಗದೇ ಇರುವ ಮೊತ್ತವನ್ನು ಆಡಿಟ್ ಮಾಡಿಸಿದ ನಂತರ ಮುಂದಿನ ಆರ್ಥಿಕ ವರ್ಷದ ತದನಂತರದಲ್ಲಿ ಬರುವ ಆರ್ಥಿಕ ವರ್ಷದಲ್ಲಿ ನೀಡಲಾಗುತ್ತದೆ. ಅದರಂತೆ 2016-17 ನೇ ಸಾಲಿನಲ್ಲಿ ಆಡಿಟ್ ಆದ ನಂತರ ನಿಖರ ವೆಚ್ಚವಾಗದೇ ಇರುವ ಮೊತ್ತ ರೂ.732.02 ಕೋಟಿಗಳನ್ನು 2018-19 ನೇ ಸಾಲಿನ ಆಯವ್ಯಯದಲ್ಲಿ ಆಯಾ ಇಲಾಖೆಗಳಿಗೆ ಮರು ಹಂಚಿಕೆ ಮಾಡಲಾಗಿದೆ.

## 2016-17 ನೇ ಸಾಲಿನಲ್ಲಿ ರಾಜ್ಯ ಪರಿಷತ್ತಿನ ನಿರ್ಣಯದಂತೆ ಇಲಾಖಾವಾರು ಅನುಷ್ಠಾನ ಮಾಡಿರುವ ಪ್ರಮುಖ ಕಾರ್ಯಕ್ರಮಗಳು:

### ಕೃಷಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 461.82 | 453.88 | 98 |
| ಟಿ.ಎಸ್.ಪಿ | 217.96 | 188.85 | 87 |

- ಒಟ್ಟಾರೆ ಕೃಷಿ ಇಲಾಖೆಯಲ್ಲಿ ಶೇ.93 ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರಿಗೆ ಬಿತ್ತನೆ ಬೀಜ ವಿತರಣೆ, ಕೃಷಿ ಉಪಕರಣಗಳು, ಸಾವಯವ/ಬಯೋ ಗೊಬ್ಬರ, ಹನಿ ನೀರಾವರಿ ಮತ್ತು ತುಂತುರು ನೀರಾವರಿ ಘಟಕಗಳು/ ಗ್ರೀನ್‌ಹೌಸ್, ಪಾಲಿಹೌಸ್ ಇತ್ಯಾದಿ ಸೌಲಭ್ಯಗಳನ್ನು ಶೇಕಡ ೯೦ರ ಸಹಾಯಧನದಲ್ಲಿ ನೀಡಲಾಗಿದೆ.
- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರಿಗೆ ಟ್ರಾಕ್ಟರ್ ಖರೀದಿಗೆ ರೂ. 2.00 ಲಕ್ಷ ಸಹಾಯಧನ ನೀಡಲಾಗಿದೆ.
- ಕೃಷಿ ಭಾಗ್ಯ ಯೋಜನೆ - ಮಳೆ ಆಧಾರಿತ ಜಮೀನುಗಳನ್ನು ಸಮಗ್ರವಾಗಿ ಅಭಿವೃದ್ಧಿ ಪಡಿಸುವ ಕಾರ್ಯಕ್ರಮದಡಿ ರೂ.168.43 ಕೋಟಿ ವೆಚ್ಚ ಭರಿಸಲಾಗಿದೆ.
- ಪ್ರಧಾನ ಮಂತ್ರಿ ಫಸಲ್ ಭೀಮಾ ಯೋಜನೆಯಡಿ ರೂ.101.00 ಕೋಟಿ ವೆಚ್ಚ ಭರಿಸಲಾಗಿದೆ.
- ರಾಷ್ಟ್ರೀಯ ಕೃಷಿವಿಕಾಸ ಯೋಜನೆಯಡಿ ವಿವಿಧ ಕೃಷಿ ಅಭಿವೃದ್ಧಿ ಕಾರ್ಯಕ್ರಮಗಳಿಗೆ ರೂ.60.19 ಕೋಟಿ ವೆಚ್ಚ ಭರಿಸಲಾಗಿದೆ.
- ಕೃಷಿ ವಿಶ್ವ ವಿದ್ಯಾಲಯಗಳಲ್ಲಿ ವಿಜ್ಞಾನ ಕೋರ್ಸ್‌ಗಳಲ್ಲಿ ಅಧ್ಯಯನ ಮಾಡುತ್ತಿರುವ ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್, ಪುಸ್ತಕಗಳು, ಶುಲ್ಕ ಮರುಪಾವತಿ ಮತ್ತು ವಿದ್ಯಾರ್ಥಿವೇತನ ಸೌಲಭ್ಯ ನೀಡಲಾಗಿದೆ.
- ಜಲಾನಯನ ಇಲಾಖೆಯಿಂದ ಜಲಾನಯನ ಅಭಿವೃದ್ಧಿ ಯೋಜನೆಯಡಿ ನಿರ್ದಿಷ್ಟ ಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜಮೀನುಗಳ ಅಭಿವೃದ್ಧಿ ಪಡಿಸಿ, ಮಣ್ಣಿನ ತೇವಾಂಶ ಹೆಚ್ಚಿಸುವ ಕಾರ್ಯಕ್ರಮಗಳಿಗೆ ಅನುದಾನ ಒದಗಿಸಲಾಗಿದೆ
- ಎಸ್.ಸಿ./ಎಸ್.ಟಿ. ರೈತರಿಗೆ ಉಚಿತವಾಗಿ ತರಬೇತಿ ಮತ್ತು ಪ್ರಾಯೋಗಿಕ ತಾಕುಗಳಲ್ಲಿ ಬೆಳೆ ಬೆಳೆಯುವ ಸೌಲಭ್ಯ ನೀಡಲಾಗಿದೆ.

ಕೃಷಿ ಇಲಾಖೆಯಲ್ಲಿ ಮೇಲ್ಕಂಡ ವಿವಿಧ ಕಾರ್ಯಕ್ರಮಗಳಲ್ಲಿ 11.89 ಲಕ್ಷ ಪರಿಶಿಷ್ಟ ಜಾತಿ ಮತ್ತು 6.56 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಧನ ಮತ್ತು ಸೌಲಭ್ಯ ಕಲ್ಪಿಸಲಾಗಿದೆ.

**ತೋಟಗಾರಿಕೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 96.49 | 90.37 | 94 |
| ಟಿ.ಎಸ್.ಪಿ | 41.64 | 38.52 | 92 |

- ಒಟ್ಟು ಶೇ.93 ಅನುದಾನ ವೆಚ್ಚವಾಗಿರುತ್ತದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ರಾಷ್ಟ್ರೀಯ ತೋಟಗಾರಿಕೆ ಮಿಷನ್ ಮತ್ತು ರಾಷ್ಟ್ರೀಯ ಕೃಷಿ ವಿಕಾಸ ಯೋಜನೆಯ ತೋಟಗಾರಿಕೆ ಕಾರ್ಯಕ್ರಮಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗಿದೆ.
- ರಾಷ್ಟ್ರೀಯ ಸುಸ್ಥಿರ ಕೃಷಿ ಅಭಿಯಾನದಡಿ ರೂ.37.00 ಕೋಟಿ ವೆಚ್ಚದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಫಲಾನುಭವಿಗಳ ಜಮೀನುಗಳಿಗೆ ಹನಿ ಮತ್ತು ತುಂತುರು ನೀರಾವರಿ ಘಟಕಗಳನ್ನು ಅಳವಡಿಸಲು ಶೇ. 90ರಷ್ಟು ಸಹಾಯಧನ ನೀಡಲಾಗಿದೆ.
- ಸಮಗ್ರ ತೋಟಗಾರಿಕೆ ಅಭಿವೃದ್ಧಿ ಕಾರ್ಯಕ್ರಮದಡಿ ರೂ.25.23 ಕೋಟಿ ವೆಚ್ಚದಲ್ಲಿ ಹೊಸ ಪ್ರದೇಶ ವಿಸ್ತರಣೆ, ನಿರ್ವಹಣೆ, ಕೊಯ್ಲೋತ್ತರ ನಿರ್ವಹಣೆ ಘಟಕ, ನೀರು ಸಂಗ್ರಹಣಾ ಘಟಕ ಮತ್ತು ಇತರೆ ಘಟಕಗಳಡಿ ಶೇ.90ರಷ್ಟು ಸಹಾಯಧನ ನೀಡಲಾಗಿದೆ.
- ಫಲಾನುಭವಿಗಳಿಗೆ ಬೀಜ ವಿತರಣೆ ಹಂತದಿಂದ ಮಾರುಕಟ್ಟೆ ಹಂತದವರೆಗೆ ಬೆಂಬಲ ನೀಡಲಾಗಿದೆ.
- ತೋಟಗಾರಿಕೆ ವಿಶ್ವವಿದ್ಯಾಲಯದ ಮೂಲಕ ರಾಜ್ಯದಲ್ಲಿ ತೋಟಗಾರಿಕೆ ವಿಜ್ಞಾನ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಮತ್ತು ಲ್ಯಾಪ್‌ಟಾಪ್ ಸೌಲಭ್ಯ ಒದಗಿಸಲಾಗಿದೆ

ತೋಟಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 17817 ಪರಿಶಿಷ್ಟ ಜಾತಿ ಮತ್ತು 9232 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಧನ ಮತ್ತು ಸೌಲಭ್ಯ ಕಲ್ಪಿಸಲಾಗಿದೆ.

**ರೇಷ್ಮೆ ಇಲಾಖೆ :**

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 27.90 | 27.79 | 100 |
| ಟಿ.ಎಸ್.ಪಿ | 12.93 | 10.83 | 84 |

- ಒಟ್ಟು ಶೇ.92 ಅನುದಾನ ವೆಚ್ಚವಾಗಿರುತ್ತದೆ. .

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಹಿಪ್ಪನೇರಳೆ ಬೆಳೆಸುವ ರೈತರಿಗೆ ಸಹಾಯಧನ ನೀಡಲಾಗಿದೆ.
- ಹುಳು ಸಾಕಣೆ ಮನೆ ನಿರ್ಮಾಣಕ್ಕೆ ಸಹಾಯಧನ ನೀಡಲಾಗಿದೆ.
- ಚಾಕಿ ತೋಟ ನಿರ್ವಹಣೆ ಹಾಗೂ ರೇಷ್ಮೆ ಗೂಡಿನ ದರ ಕುಸಿತವಾದಾಗ ರಕ್ಷಣಾತ್ಮಕ ದರ ನೀಡಲಾಗಿದೆ
- ರೀಲಿಂಗ್ ಘಟಕಗಳಿಗೆ ಸಹಾಯಧನ ನೀಡಲಾಗಿದೆ.

ರೇಷ್ಮೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 3616 ಪರಿಶಿಷ್ಟ ಜಾತಿ ಮತ್ತು 4593 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಯಧನ ಸೌಲಭ್ಯ ಕಲ್ಪಿಸಲಾಗಿದೆ.

## ಪಶು ಸಂಗೋಪನಾ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 151.47 | 139.43 | 92 |
| ಟಿ.ಎಸ್.ಪಿ | 59.25 | 54.07 | 91 |

- ಒಟ್ಟು ಶೇ.92 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಸದಸ್ಯರು ಹಾಲು ಉತ್ಪಾದಕರ ಸಹಕಾರ ಸಂಘಗಳಿಗೆ ಪೂರೈಕೆ ಮಾಡುವ ಹಾಲಿಗೆ ಕೆ.ಎಂ.ಎಫ್. ಮೂಲಕ ಪ್ರತಿ ಲೀಟರ್‌ಗೆ ರೂ. 4 ಪ್ರೋತ್ಸಾಹಧನ ನೀಡಲು ಒಟ್ಟು ರೂ.127.54 ಕೋಟಿ ವೆಚ್ಚ ಭರಿಸಲಾಗಿದೆ.
- ಹೈನುಗಾರಿಕೆ ಯೋಜನೆಯಡಿ ಎರಡು ಹಸು/ ಎಮ್ಮೆ ಖರೀದಿಸಲು ಶೇ. 50 ರಷ್ಟು ಸಹಾಯಧನ ನೀಡಲಾಗಿದೆ ಮತ್ತು ವಿಮಾ ಸೌಕರ್ಯ ಕಲ್ಪಿಸಲಾಗಿದೆ.
- ಕುರಿ/ ಮೇಕೆ ಸಾಕಾಣಿಕೆಗೆ ಶೇ. 75 ರಷ್ಟು ಸಹಾಯಧನ ನೀಡಲಾಗಿದೆ.
- ಜಾನುವಾರುಗಳಿಗೆ ರೋಗನಿರೋಧಕ ಲಸಿಕೆಗಳು ಹಾಗೂ ಪಶು ವೈದ್ಯಕೀಯ ವೆಚ್ಚ ಭರಿಸಲಾಗಿದೆ.
- ಬೀದರ್ ಪಶು ವೈದ್ಯಕೀಯ ವಿಶ್ವವಿದ್ಯಾಲಯದ ಮೂಲಕ ರಾಜ್ಯದಲ್ಲಿ ಪಶು ವೈದ್ಯಕೀಯ ವಿಜ್ಞಾನ ಅಧ್ಯಯನ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಣೆ ಮಾಡಲಾಗಿದೆ.
- ಕುರಿ/ ಮೇಕೆ ಆಕಸ್ಮಿಕ ಮರಣಕ್ಕೆ ತುತ್ತಾದಲ್ಲಿ ರೂ.5000/- ಪರಿಹಾರ ನೀಡಲಾಗಿದೆ.
- ಜಾನುವಾರುಗಳ ವಿಮಾ ಪ್ರೀಮಿಯಂ ಪಾವತಿಸಲಾಗಿದೆ.

ಪಶುಸಂಗೋಪನೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 88454 ಲಕ್ಷ ಪರಿಶಿಷ್ಟ ಜಾತಿ ಮತ್ತು 45013 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಯಧನ ಮತ್ತು ಸೌಲಭ್ಯ ಕಲ್ಪಿಸಲಾಗಿದೆ.

## ಮೀನುಗಾರಿಕೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 24.90 | 24.51 | 98 |
| ಟಿ.ಎಸ್.ಪಿ | 8.63 | 8.43 | 98 |

- ಒಟ್ಟು ಶೇ.98 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀನುಗಾರರಿಗೆ ಮನೆ ನಿರ್ಮಾಣ ಮಾಡಲು ಮತ್ಸ್ಯಾಶ್ರಯ ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿ ರೂ. 1.50 ಲಕ್ಷ ಮತ್ತು ನಗರಪ್ರದೇಶದಲ್ಲಿ ರೂ. 1.80 ಲಕ್ಷ ಘಟಕ ಸಹಾಯಧನ ನೀಡಲಾಗಿದೆ.
- ಜಲಾಶಯದಲ್ಲಿ ಮೀನು ಮರಿ ಬಿತ್ತನೆ, ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್ ಹರಿಗೋಲು ವಿತರಣೆ, ಮೀನುಕೊಳ ನಿರ್ಮಾಣ, ಮೀನು ಸಾಕಾಣಿಕೆ ಸಹಾಯಧನ ಮೀನುಮರಿ ಪಾಲನೆಗೆ ಮೂಲಭೂತ ಸೌಲಭ್ಯ, ಮೀನು ಸಾಗಾಣಿಕೆ ವಾಹನ ಖರೀದಿಗೆ ಸಹಾಯಧನ, ಮೀನುಗಾರಿಕೆ ಸಲಕರಣೆ ಖರೀದಿಗೆ ಶೇ.80 ರಿಂದ 100ರಷ್ಟು ಸಹಾಯಧನ ನೀಡಲಾಗಿದೆ.
- ಮೀನುಗಾರಿಕೆ ದೋಣಿಗಳಿಗೆ ಡೀಸೆಲ್ ಮಾರಾಟ ತೆರಿಗೆ ಮರುಪಾವತಿ ಮಾಡಲಾಗಿದೆ.

- ಮೀನುಗಾರರಿಗೆ ಮೀನು ಮಾರಾಟ ಸಲುವಾಗಿ ವಾಹನ ಸೌಲಭ್ಯ ಶೇ.೮೦ ರಷ್ಟು ಗರಿಷ್ಠ ರೂ.4.40 ಲಕ್ಷ ಸಹಾಯಧನ ನೀಡಲಾಗಿದೆ.
- ಕರಾವಳಿ ಮೀನುಗಾರರಿಗೆ ಮೀನುಗಾರಿಕೆ ಇಲ್ಲದ ೩ ತಿಂಗಳ ಅವಧಿಯಲ್ಲಿ (ಜೂನ್-ಆಗಸ್ಟ್) ಮಾಸಿಕ ರೂ.1800/- ಧನಸಹಾಯ ನೀಡಲಾಗಿದೆ.

ಮೀನುಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 4591 ಪರಿಶಿಷ್ಟ ಜಾತಿ ಮತ್ತು 751 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಯಧನ ಮತ್ತು ಸೌಲಭ್ಯ ಕಲ್ಪಿಸಲಾಗಿದೆ.

## ಸಾರಿಗೆ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 5.75 | 5.75 | 100 |
| ಟಿ.ಎಸ್.ಪಿ | 2.36 | 2.36 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.
- ಮೀಸಲು ಕ್ಷೇತ್ರಗಳಲ್ಲಿ ಬಸ್‌ತಂಗುದಾಣ ನಿರ್ಮಾಣ.

## ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 2042.56 | 1833.11 | 90 |
| ಟಿ.ಎಸ್.ಪಿ | 978.82 | 870.32 | 89 |

- ಒಟ್ಟು ಶೇ.೯೦ ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪ.ಪಂಗಡದ ಕುಟುಂಬಗಳಿಗೆ ಸ್ವಚ್ಛ ಭಾರತ ಅಭಿಯಾನದಡಿ 1.56 ಲಕ್ಷ ಪರಿಶಿಷ್ಟ ಜಾತಿ ಕುಂಟುಬಗಳಿಗೆ ಮತ್ತು ೦.69 ಲಕ್ಷ ಪರಿಶಿಷ್ಟ ಪಂಗಡಗಳ ಕುಟುಂಬಗಳಿಗೆ ವೈಯಕ್ತಿಕ ಶೌಚಾಲಯಗಳ ನಿರ್ಮಾಣಕ್ಕೆ ಸಹಾಯಧನ, ಸ್ನಾನಗೃಹ ನಿರ್ಮಿಸಲು ರೂ.4೦೦೦/- ಗಳನ್ನು ಹೆಚ್ಚುವರಿಯಾಗಿ ನೀಡಲು ರೂ.353.೦೦ ಕೋಟಿ ವೆಚ್ಚ ಭರಿಸಲಾಗಿದೆ.
- ಸುವರ್ಣ ಗ್ರಾಮ ಯೋಜನೆಯಡಿಯಲ್ಲಿ ೯39 ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಾಲೋನಿಗಳಲ್ಲಿ ರೂ.153.೦೦ ಕೋಟಿ ವೆಚ್ಚದಲ್ಲಿ ಸಿ.ಸಿ.ರಸ್ತೆ, ಚರಂಡಿಗಳನ್ನು ನಿರ್ಮಿಸಲಾಗಿದೆ.
- ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನೆಯಡಿ ರೂ.137.೦೦ ಕೋಟಿ ವೆಚ್ಚದಲ್ಲಿ 369 ಕಿಲೋಮೀಟರ್ ಸಂಪರ್ಕ ರಸ್ತೆಗಳನ್ನು ನಿರ್ಮಿಸಲಾಗಿದೆ.
- ಗ್ರಾಮೀಣ ನೀರು ಸರಬರಾಜು ಯೋಜನೆಯಡಿ 1.6೦ ಲಕ್ಷ ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡಗಳ ಕುಟುಂಬಕ್ಕೆ ಕುಡಿಯುವ ನೀರಿನ ಸಂಪರ್ಕ ಒದಗಿಸಲು ರೂ.474.೦೦ ಕೋಟಿ ವೆಚ್ಚ ಭರಿಸಲಾಗಿದೆ.
- ರಾಷ್ಟ್ರೀಯ ಗ್ರಾಮೀಣ ಜೀವನೋಪಾಯ ಅಭಿಯಾನದಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ 25865 ಫಲಾನುಭವಿಗಳಿಗೆ ಧನಸಹಾಯ ನೀಡಲಾಗಿದೆ.
- ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತರಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನರಿಗೆ ರೂ.೯1೦.೦೦ ಕೋಟಿ ವೆಚ್ಚ ಮಾಡಲಾಗಿದೆ.

## ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 50.62 | 50.62 | 100 |
| ಟಿ.ಎಸ್.ಪಿ | 40.04 | 40.04 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ ಮತ್ತು ಪಂಗಡದ ಅರಣ್ಯ ವಾಸಿಗಳಿಗೆ ಎಲ್‌ಪಿಜಿ ಸ್ಟೌವ್, ರೆಗ್ಯುಲೇಟರ್ ಮತ್ತು ಸಿಲಿಂಡರ್ ಸರಬರಾಜು ಮಾಡಲಾಗಿದೆ.
- ಜೇನುಸಾಕಾಣಿಕೆ ಪೆಟ್ಟಿಗೆ ವಿತರಣೆ ಮತ್ತು ತರಬೇತಿ ನೀಡಲಾಗಿದೆ.
- ಮನೆಗಳಿಗೆ ಸೋಲಾರ್ ವಾಟರ್‌ಹೀಟರ್, ಸೋಲಾರ್ ದೀಪ ಅಳವಡಿಕೆ, ಬಿದಿರು ವಿತರಣೆ ಮಾಡಲಾಗಿದೆ.
- ರಸ್ತೆ ಬದಿಯಲ್ಲಿ ನಡುತೋಪು ನಿರ್ವಹಣೆ ಕಾರ್ಯಕ್ರಮ ಅನುಷ್ಠಾನಗೊಳಿಸಲಾಗಿದೆ.
- ಪರಿಶಿಷ್ಟ ಜಾತಿ/ಪ.ಪಂಗಡದವರಿಗೆ ಸಸಿಗಳನ್ನು ಉಚಿತವಾಗಿ ವಿತರಣೆ ಮಾಡಲಾಗಿದೆ.

ಅರಣ್ಯ, ಜೀವಿಶಾಸ್ತ್ರ ಮತ್ತು ಪರಿಸರ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 49270 ಪರಿಶಿಷ್ಟ ಜಾತಿ ಮತ್ತು 69154 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಯಧನ ಮತ್ತು ಸೌಲಭ್ಯ ಕಲ್ಪಿಸಲಾಗಿದೆ.

## ಸಹಕಾರ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 93.57 | 92.83 | 99 |
| ಟಿ.ಎಸ್.ಪಿ | 67.28 | 54.82 | 82 |

- ಒಟ್ಟು ಶೇ.91 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದ ರೈತರು ಪಡೆದ ಕೃಷಿ ಸಾಲಕ್ಕೆ ಬಡ್ಡಿ ಸಹಾಯಧನ ಕಾರ್ಯಕ್ರಮದಡಿ ರೂ.85.61 ಕೋಟಿ ವೆಚ್ಚದಲ್ಲಿ 3.20 ಲಕ್ಷ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಸಹಕಾರ ಸಂಘಗಳಲ್ಲಿ ಸದಸ್ಯತ್ವ ನೋಂದಣಿ ಯೋಜನೆಯಡಿ 54313 ಪರಿಶಿಷ್ಟ ಜಾತಿ /ಪರಿಶಿಷ್ಟ ಪಂಗಡದವರನ್ನು ಸದಸ್ಯರನ್ನಾಗಿ ನೋಂದಾಯಿಸಲಾಗಿದೆ.
- ಸಹಕಾರ ಸಂಘಗಳಲ್ಲಿ ಸದಸ್ಯತ್ವ ಹೊಂದಿರುವ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರಿಗೆ "ಯಶಸ್ವಿನಿ"ಯೋಜನೆಯಡಿ ಗ್ರಾಮೀಣ ರೈತರು ರೂ.50/- ನಗರ ಪ್ರದೇಶಗಳ ರೈತರಿಗೆ ರೂ.110/- ವಂತಿಕೆ ಭರಿಸಿ, ಉಚಿತ ಆರೋಗ್ಯ ಸೌಲಭ್ಯ ಒದಗಿಸಲಾಗಿದೆ. ಸದರಿ ಯೋಜನೆಯಡಿ 6874 ಪ.ಜಾತಿ ಹಾಗೂ 3296 ಪ.ಪಂಗಡದ ಸದಸ್ಯರಿಗೆ ಸೌಲಭ್ಯ ಕಲ್ಪಿಸಲಾಗಿದೆ.
- ಪರಿಶಿಷ್ಟ ಪಂಗಡ ಉಪಯೋಜನೆಯಡಿ 4 ಲ್ಯಾಂಪ್ಸ್ ಸಹಕಾರ ಸಂಘಗಳಿಗೆ ರೂ.50.00 ಲಕ್ಷ ಧನಸಹಾಯ ನೀಡಲಾಗಿದೆ.

ಸಹಕಾರ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ ಪರಿಶಿಷ್ಟ ಜಾತಿ 4.76 ಲಕ್ಷ ಮತ್ತು 2.26 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸಹಾಯಧನ ಮತ್ತು ಸೌಲಭ್ಯ ಕಲ್ಪಿಸಲಾಗಿದೆ.

## ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 318.32 | 300.34 | 94 |
| ಟಿ.ಎಸ್.ಪಿ | 125.51 | 117.40 | 94 |

- ಒಟ್ಟು ಶೇ.94 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ 37646 ಸ್ವಸಹಾಯ ಸ್ತ್ರೀಶಕ್ತಿ ಗುಂಪುಗಳಿಗೆ ತಲಾ ರೂ.5000/- ಸುತ್ತು ನಿಧಿ ಕಾರ್ಯಕ್ರಮದಡಿ ರೂ.21.81 ಕೋಟಿ ವೆಚ್ಚ ಭರಿಸಲಾಗಿದೆ.
- ಉದ್ಯೋಗಿನಿ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪಂಗಡದ ಫಲಾನುಭವಿಗಳಿಗೆ 50000/- ರೂ.ಗಳಂತೆ ಸಹಾಯಧನ ಒದಗಿಸಲಾಗಿದೆ.
- ಚೇತನ ಕಾರ್ಯಕ್ರಮದಡಿ ಲೈಂಗಿಕ ಕಾರ್ಯಕರ್ತೆಯರಿಗೆ ಸ್ವಯಂ ಉದ್ಯೋಗದ ಮೂಲಕ ಸ್ವಾವಲಂಬನೆಯ ಜೀವನ ನಡೆಸಲು ಅನುಕೂಲವಾಗುವಂತೆ ರೂ. 20000/- ಪ್ರೋತ್ಸಾಹ ಧನ ಹಾಗೂ ತಲಾ 1500/- ರೂ.ಗಳ ವೆಚ್ಚದಲ್ಲಿ ಉದ್ಯಮಶೀಲತಾ ತರಬೇತಿ ನೀಡಲಾಗಿದೆ.
- ಕೆ.ಎಸ್.ಎಫ್.ಸಿ.ಯಿಂದ ಸಾಲ ಪಡೆದ ಮಹಿಳಾ ಉದ್ದಿಮೆದಾರರಿಗೆ ಶೇ.4 ಬಡ್ಡದರದಲ್ಲಿ ಸಾಲ ನೀಡಲಾಗಿದೆ. ಉಳಿದ ಶೇ.10 ರಷ್ಟು ಬಡ್ಡಿಯನ್ನು ರಾಜ್ಯ ಮಹಿಳಾ ಅಭಿವೃದ್ಧಿ ನಿಗಮ ಭರಿಸುತ್ತದೆ (ಸಾಲ ಮೊತ್ತ ರೂ.5.00 ಲಕ್ಷದಿಂದ ರೂ.50.00 ಲಕ್ಷದವರೆಗೆ)
- 29717 ಪರಿಶಿಷ್ಟ ಜಾತಿ/ ಪರಿಶಿಷ್ಟ ವರ್ಗದ ಅಂಗವಿಕಲರಿಗೆ ಮಾಸಿಕ ಪಿಂಚಣಿ ನೀಡಲು ರೂ. 17.83 ಕೋಟಿ ವೆಚ್ಚ ಭರಿಸಲಾಗಿದೆ.
- ಅಂಗವಿಕಲರಿಗೆ ವಿದ್ಯಾರ್ಥಿ ವೇತನ, ಸಲಕರಣೆ ವಿತರಣೆ, ಸ್ವಯಂ ಸೇವಾ ಸಂಸ್ಥೆಯ ಮೂಲಕ ತರಬೇತಿ, ನಿರುದ್ಯೋಗ ಭತ್ಯೆ ಹಾಗೂ ವಿಕಲಚೇತನರಿಗೆ ಧನ ಸಹಾಯ ನೀಡಲಾಗಿದೆ.
- ಭಾಗ್ಯಲಕ್ಷ್ಮಿ ಯೋಜನೆಯಡಿ ಪ.ಜಾತಿಯ 30428 ಹಾಗೂ ಪ.ಪಂಗಡದ 7232 ಫಲಾನುಭವಿಗಳಿಗೆ ರೂ.91.00 ಕೋಟಿ ವೆಚ್ಚದಲ್ಲಿ ಸೌಲಭ್ಯ ಕಲ್ಪಿಸಲಾಗಿದೆ.
- ಅಪೌಷ್ಠಿಕ ಮಕ್ಕಳ ವೈದ್ಯಕೀಯ ವೆಚ್ಚ ಭರಿಸುವ “ಬಾಲ ಸಂಜೀವಿನಿ” ಯೋಜನೆಯಡಿಯಲ್ಲಿ ಔಷಧೋಪಚಾರ, ಚಿಕಿತ್ಸೆ, ಪೌಷ್ಠಿಕ ಆಹಾರಕ್ಕಾಗಿ ಪ.ಜಾತಿಯ 2281 ಹಾಗೂ ಪ.ಪಂಗಡದ 1549 ಮಕ್ಕಳಿಗೆ ಸೌಲಭ್ಯ ನೀಡಲಾಗಿದೆ.
- ಗುರುತಿಸಲ್ಪಟ್ಟ ದೇವದಾಸಿ ಮಹಿಳೆಯರ ಪುನರ್ವಸತಿ ಕಾರ್ಯಕ್ರಮದಡಿ 28737 ದೇವದಾಸಿಯರಿಗೆ ಮಾಸಿಕ ರೂ. 1500 ಮಾಸಾಶನ ನೀಡಲು ರೂ.35.20 ಕೋಟಿ ವೆಚ್ಚ ಭರಿಸಲಾಗಿದೆ.
- ದೇವದಾಸಿಯರ ವಸತಿ ನಿರ್ಮಾಣಕ್ಕೆ ಗ್ರಾಮೀಣ ಪ್ರದೇಶದಲ್ಲಿ ಘಟಕ ವೆಚ್ಚ ರೂ.1.50 ಲಕ್ಷ ಹಾಗೂ ನಗರ ಪ್ರದೇಶಗಳಲ್ಲಿ ಘಟಕ ವೆಚ್ಚ ರೂ.1.80 ಲಕ್ಷ ಸಹಾಯಧನ ನೀಡಲಾಗುತ್ತಿದೆ.
- ಅಂಗನವಾಡಿ ಕಟ್ಟಡಗಳ ನಿರ್ಮಾಣಕ್ಕೆ ಅನುದಾನ ನೀಡಲಾಗಿದೆ.
- ಅಂಗನವಾಡಿ ಮಕ್ಕಳ ಪೌಷ್ಠಿಕ ಆಹಾರ (ಐ.ಸಿ.ಡಿ.ಎಸ್) ಯೋಜನೆಯಡಿ ಒಟ್ಟು ರೂ.149.05 ಕೋಟಿ ವೆಚ್ಚದಲ್ಲಿ ಪ.ಜಾತಿಯ 6.28 ಲಕ್ಷ ಹಾಗೂ ಪ.ಪಂಡದ 2.86 ಲಕ್ಷ ಮಕ್ಕಳಿಗೆ ಪೌಷ್ಠಿಕ ಆಹಾರ ಒದಗಿಸಲಾಗಿದೆ.

ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪರಿಶಿಷ್ಟ ಜಾತಿಯ 8.96 ಲಕ್ಷ ಹಾಗೂ 4.03 ಲಕ್ಷ ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸೌಲಭ್ಯ ಒದಗಿಸಿದೆ.

## ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 4.59 | 4.14 | 90 |
| ಟಿ.ಎಸ್.ಪಿ | 0.66 | 0.34 | 52 |

- ಒಟ್ಟು ಶೇ.71 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಮಾಲಿಕತ್ವ/ ಸಂಪಾದಕತ್ವದ ಪತ್ರಿಕೆಗಳಿಗೆ ಜಾಹೀರಾತು ನೀಡಲಾಗಿದೆ.
- ಪತ್ರಿಕೋದ್ಯಮ ಕೋರ್ಸ್‌ನಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ತರಬೇತಿ ನೀಡಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದವರು ನಿರ್ಮಾಣ ಮತ್ತು ನಿರ್ದೇಶಿಸಿದ ಚಲನಚಿತ್ರಗಳಿಗೆ ರೂ.10.00 ಲಕ್ಷ ಪ್ರೋತ್ಸಾಹಧನ ನೀಡಲಾಗಿದೆ.

ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 274 ಪರಿಶಿಷ್ಟ ಜಾತಿ ಮತ್ತು 42 ಪರಿಶಿಷ್ಟ ಪಂಗಡ ಜನರಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಪ್ರವಾಸೋದ್ಯಮ ಇಲಾಖೆ:

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 20.65 | 20.15 | 98 |
| ಟಿ.ಎಸ್.ಪಿ | 6.48 | 6.27 | 97 |

- ಒಟ್ಟು ಶೇ.97 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ರಾಜ್ಯದ ಸರ್ಕಾರಿ ಪ್ರೌಢಶಾಲೆಯ 14105 ಪರಿಶಿಷ್ಟ ಜಾತಿ ಹಾಗೂ 7329 ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ಕರ್ನಾಟಕ ದರ್ಶನ ಪ್ರವಾಸ ಕಾರ್ಯಕ್ರಮ ಏರ್ಪಡಿಸಲಾಗಿದೆ.
- ರಾಜ್ಯದ 30 ಜಿಲ್ಲೆಯ 329 ಅರ್ಹ ಪರಿಶಿಷ್ಟ ಜಾತಿ ಮತ್ತು 62 ಪರಿಶಿಷ್ಟ ಪಂಗಡದ ವಿದ್ಯಾವಂತ ನಿರುದ್ಯೋಗಿಗಳಿಗೆ ಸ್ವಯಂ ಉದ್ಯೋಗ ಕಲ್ಪಿಸಲು ಪ್ರವಾಸಿ ಟ್ಯಾಕ್ಸಿ ಯೋಜನೆಯಡಿ ತಲಾ ರೂ.2.00 ಲಕ್ಷ ಸಹಾಯಧನ ನೀಡಲಾಗಿದೆ.

ಪ್ರವಾಸೋದ್ಯಮ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 14434 ಪರಿಶಿಷ್ಟ ಜಾತಿ ಮತ್ತು 7396 ಪರಿಶಿಷ್ಟ ಪಂಗಡ ಜನರಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 17.97 | 17.06 | 95 |
| ಟಿ.ಎಸ್.ಪಿ | 7.41 | 6.93 | 93 |

- ಒಟ್ಟು ಶೇ.94 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರಾಜ್ಯ/ರಾಷ್ಟ್ರೀಯ/ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ರೂ.25000/- ದಿಂದ ರೂ. 1.00 ಲಕ್ಷದವರೆಗೆ ಪ್ರೋತ್ಸಾಹಧನ ನೀಡಲಾಗಿದೆ.
- ಜಿಮ್ ಸ್ಥಾಪನೆ ಮಾಡಲು ಸಲಕರಣೆ ಖರೀದಿಗೆ ರೂ.2.00 ಲಕ್ಷ ಸಹಾಯಧನ ನೀಡಲಾಗಿದೆ.
- ಸಮಾಜ ಕಲ್ಯಾಣ/ ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆಗಳ ವಸತಿ ಶಾಲೆಗಳಿಗೆ ಮತ್ತು ವಿದ್ಯಾರ್ಥಿನಿಲಯಗಳಿಗೆ ಕ್ರೀಡಾ ಸಾಮಗ್ರಿಗಳ ಸರಬರಾಜು ಮಾಡಲಾಗಿದೆ.
- ರಾಜ್ಯ/ ರಾಷ್ಟ್ರ/ ಅಂತರರಾಷ್ಟ್ರೀಯ ಮಟ್ಟದ ಕ್ರೀಡಾಪಟುಗಳಿಗೆ ತರಬೇತಿ/ ಕ್ರೀಡಾ ಸಲಕರಣೆ/ ಪ್ರಯಾಣ ಭತ್ಯೆ/ ದಿನ ಭತ್ಯೆಗಳನ್ನು ನೀಡಲಾಗಿದೆ.
- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಯುವಕ-ಯುವತಿಯವರಿಗೆ ಕ್ರೀಡಾ ಕೌಶಲ್ಯ ತರಬೇತಿ ನೀಡಲಾಗಿದೆ.

ಯುವಜನ ಸೇವಾ ಮತ್ತು ಕ್ರೀಡಾ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 888 ಪರಿಶಿಷ್ಟ ಜಾತಿ ಮತ್ತು 461 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಕಂದಾಯ ಇಲಾಖೆ (ಸಾಮಾಜಿಕ ಭದ್ರತೆ)

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 461.58 | 460.06 | 100 |
| ಟಿ.ಎಸ್.ಪಿ | 113.66 | 112.72 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಡತನ ರೇಖೆಗಿಂತ ಕೆಳಗಿರುವ, ವಯಸ್ಸಾದ ಹಿರಿಯ ನಾಗರೀಕರಿಗೆ, ವಿಧವೆಯರಿಗೆ ಹಾಗೂ ವಿಕಲಚೇತನರಿಗೆ ಮಾಸಿಕ ಪಿಂಚಣಿ ನೀಡಲಾಗಿದೆ.
- "ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆ"ಯಡಿ 18 ರಿಂದ 59 ವರ್ಷ ವಯೋಮಿತಿಯ ದುಡಿಯುವ ಕುಟುಂಬದ ಮುಖ್ಯಸ್ಥ ಮರಣ ಹೊಂದಿದಲ್ಲಿ 20 ಸಾವಿರ ರೂ ಧನ ಸಹಾಯ ನೀಡಲಾಗಿದೆ.
- "ರಾಷ್ಟ್ರೀಯ ಕುಟುಂಬ ಸೌಲಭ್ಯ ಯೋಜನೆ"ಯಡಿ ಅಂತ್ಯ ಸಂಸ್ಕಾರ ವೆಚ್ಚಕ್ಕಾಗಿ ತಲಾ ರೂ.1000/- ಧನ ಸಹಾಯ ನೀಡಲಾಗಿದೆ.
- "ಆದರ್ಶ ವಿವಾಹ" ಯೋಜನೆಗೆ ತಲಾ ರೂ.10,000/- ದಂತೆ ಪ್ರೋತ್ಸಾಹಧನ ನೀಡಲಾಗಿದೆ.
- ಶ್ರೀ ಸಾಮಾನ್ಯ ವಿಮಾ ಯೋಜನೆಯಡಿ 18 ರಿಂದ 59 ವರ್ಷ ವಯೋಮಿತಿಯ ಬಡತನ ರೇಖೆಗಿಂತ ಕೆಳಗಿರುವ 72 ವಿವಿಧ ಕಸುಬುಗಳಡಿ ಬರುವ ಕುಟುಂಬಗಳಿಗೆ ವಿಮಾ ಸುರಕ್ಷಾ ಸೌಲಭ್ಯ ಒದಗಿಸಲಾಗಿದೆ.
- ಆರಾಧನಾ ಯೋಜನೆಯಡಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ದೇವಾಲಯ ನಿರ್ಮಾಣ/ಜೀರ್ಣೋದ್ಧಾರ ಕಾರ್ಯಕ್ರಮಗಳಿಗಾಗಿ ರೂ.20.00 ಕೋಟಿ ವೆಚ್ಚ ಭರಿಸಲಾಗಿದೆ.

ಕಂದಾಯ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 14.12 ಲಕ್ಷ ಪರಿಶಿಷ್ಟ ಜಾತಿ ಮತ್ತು 3.41 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 5.80 | 5.80 | 100 |
| ಟಿ.ಎಸ್.ಪಿ | 2.32 | 2.32 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- 652 ಪ.ಜಾತಿ/ಪ.ಪಂಗಡದ ಪದವೀಧರ ಅಭ್ಯರ್ಥಿಗಳಿಗೆ ಕಿಯೋನಿಕ್ಸ್ ಸಂಸ್ಥೆಯ ಮೂಲಕ ಉನ್ನತ ಮಟ್ಟದ ಕಂಪ್ಯೂಟರ್ ತರಬೇತಿ ನೀಡಲಾಗಿದೆ.

## ವಸತಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1623.81 | 1576.58 | 97 |
| ಟಿ.ಎಸ್.ಪಿ | 423.84 | 423.84 | 100 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಆಶ್ರಯ, ಬಸವ ವಸತಿ ಮತ್ತು ಇಂದಿರಾ ಆವಾಸ್ ಯೋಜನೆಯಡಿ ಗ್ರಾಮೀಣ/ನಗರ ಪ್ರದೇಶದಲ್ಲಿ ಮತ್ತು ಡಾ:.ಬಿ.ಆರ್.ಅಂಬೇಡ್ಕರ್ ನಿವಾಸ್ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿ ರೂ. 1.50 ಲಕ್ಷ ಹಾಗೂ ನಗರ ಪ್ರದೇಶಗಳಲ್ಲಿ ರೂ.1.80 ಲಕ್ಷ ಘಟಕ ವೆಚ್ಚ ನಿಗದಿಪಡಿಸಲಾಗಿದೆ.
- ಪ.ಜಾತಿ/ಪ.ಪಂಗಡದ ಕೊಳಗೇರಿಗಳಲ್ಲಿ ರೂ.57.00 ಕೋಟಿ ವೆಚ್ಚದಲ್ಲಿ ಮೂಲಭೂತ ಸೌಕರ್ಯಗಳ ಕಾಮಗಾರಿಗಳನ್ನು ಅನುಷ್ಟಾನ ಮಾಡಲಾಗಿದೆ.

ವಸತಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 71359 ಲಕ್ಷ ಮನೆಗಳನ್ನು ಪರಿಶಿಷ್ಟ ಜಾತಿ ಮತ್ತು 36728 ಲಕ್ಷ ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಮನೆಗಳನ್ನು ನಿರ್ಮಿಸಲಾಗಿದೆ.

## ಉನ್ನತ ಶಿಕ್ಷಣ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 257.86 | 238.73 | 93 |
| ಟಿ.ಎಸ್.ಪಿ | 98.99 | 94.28 | 95 |

- ಒಟ್ಟು ಶೇ.94 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಶಿಕ್ಷಣ ಗುಣಮಟ್ಟ ಸುಧಾರಿಸಲು ಇಂಜಿನಿಯರಿಂಗ್ ಕಾಲೇಜುಗಳಿಗೆ ಉಪಕರಣಗಳನ್ನು ಒದಗಿಸಲಾಗಿದೆ.
- ಕುಟುಂಬದ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕಿಂತ ಮೇಲ್ಪಟ್ಟು ರೂ.10.00 ಲಕ್ಷ ಒಳಗಿರುವ ಇಂಜಿನಿಯರಿಂಗ್ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.
- ಪಿ.ಹೆಚ್.ಡಿ. ವಿದ್ಯಾರ್ಥಿಗಳಿಗೆ ಸ್ಟೈಪೆಂಡ್ ನೀಡಲಾಗಿದೆ.
- ವಿಶ್ವವಿದ್ಯಾಲಯಗಳಿಗೆ ನೀಡಲಾಗುವ ಅನುದಾನದಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಹೆಚ್ಚುವರಿ ಭೋಜನಾ ವೆಚ್ಚ ಭರಿಸಲಾಗಿದೆ.
- ವಿಜ್ಞಾನ ಕೋರ್ಸ್‌ಗಳಿಗೆ ಪ್ರವೇಶ ಪಡೆದ ಪ್ರತಿಭಾವಂತ ಪದವಿ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ವೇತನ ನೀಡಲಾಗಿದೆ.

- ಪ್ರಥಮ ದರ್ಜೆ ಕಾಲೇಜುಗಳ ಕಟ್ಟಡಗಳನ್ನು ನಿರ್ಮಿಸಲು ಕ್ರಮವಹಿಸಲಾಗಿದೆ.
- ಬೆಂಗಳೂರು ವಿಶ್ವವಿದ್ಯಾಲಯ ಆವರಣದಲ್ಲಿ ಡಾ:.ಬಿ.ಆರ್.ಅಂಬೇಡ್ಕರ್ ಸ್ಕೂಲ್ ಆಫ್ ಇಕನಾಮಿಕ್ಸ್ ಸ್ಥಾಪಿಸಲಾಗಿದೆ.
- ವಾರ್ಷಿಕ ವರಮಾನ ರೂ.2.50 ಲಕ್ಷ ಒಳಗಿರುವ 32981 ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ನೀಡಲಾಗಿದೆ.

## ಪ್ರಾಥಮಿಕ ಮತ್ತು ಮಾಧ್ಯಮಿಕ ಶಿಕ್ಷಣ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 849.75 | 801.68 | 94 |
| ಟಿ.ಎಸ್.ಪಿ | 340.67 | 320.19 | 94 |

- ಒಟ್ಟು ಶೇ.94 ಅನುದಾನ ವೆಚ್ಚಮಾಡಲಾಗಿದೆ.

<u>**ಪ್ರಮುಖ ಕಾರ್ಯಕ್ರಮಗಳು:**</u>

- ವಿದ್ಯಾ ವಿಕಾಸ ಯೋಜನೆಯಡಿ ರೂ.216.87 ಕೋಟಿ ವೆಚ್ಚದಲ್ಲಿ 16.53 ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ, ಪಠ್ಯ ಪುಸ್ತಕ, ಸಮವಸ್ತ್ರ, ಶೂ ಒದಗಿಸಲಾಗಿದೆ.
- 14107 8ನೇ ತರಗತಿ ವಿದ್ಯಾರ್ಥಿಗಳಿಗೆ ರೂ.4.78 ಕೋಟಿ ವೆಚ್ಚದಲ್ಲಿ ಬೈಸಿಕಲ್ ವಿತರಣೆ ಮಾಡಲಾಗಿದೆ.
- ಅಕ್ಷರ ದಾಸೋಹದಡಿ ರೂ.420.62 ಕೋಟಿ ವೆಚ್ಚದಲ್ಲಿ 14.97 ಲಕ್ಷ ವಿದ್ಯಾರ್ಥಿಗಳಿಗೆ ಬಿಸಿಊಟ ಒದಗಿಸಲಾಗಿದೆ.
- ಎಸ್.ಎಸ್.ಎಲ್.ಸಿ./ಪಿ.ಯು.ಸಿ ವಿದ್ಯಾರ್ಥಿಗಳ ಪರೀಕ್ಷಾ ಶುಲ್ಕ ಪಾವತಿಸಲಾಗಿದೆ.
- ಸರ್ವಶಿಕ್ಷಾ ಅಭಿಯಾನ ಕಾರ್ಯಕ್ರಮದಡಿ ರೂ.172.00 ಕೋಟಿ ವೆಚ್ಚದಲ್ಲಿ 14.97 ಲಕ್ಷ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ವಿವಿಧ ಸೌಲಭ್ಯಗಳನ್ನು ಒದಗಿಸಲಾಗಿದೆ.
- ರಾಷ್ಟ್ರೀಯ ಮಾಧ್ಯಮಿಕ ಶಿಕ್ಷಣ ಅಭಿಯಾನ ಯೋಜನೆಯಡಿ ರೂ.33.24 ಕೋಟಿ ವೆಚ್ಚದಲ್ಲಿ 1.97 ಲಕ್ಷ ವಿದ್ಯಾರ್ಥಿಗಳಿಗೆ ಶಿಕ್ಷಣ ಗುಣಮಟ್ಟ ಹೆಚ್ಚಿಸುವ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ.
- ಮಾಧ್ಯಮಿಕ ಶಾಲೆಗಳಲ್ಲಿ ಕಂಪ್ಯೂಟರ್ ಸಾಕ್ಷರತಾ ಜಾಗೃತಿ ಕಾರ್ಯಕ್ರಮ ಅನುಷ್ಠಾನ ಮಾಡಲಾಗಿದೆ.
- ಶಿಕ್ಷಣ ಹಕ್ಕು ಕಾಯ್ದೆಯಡಿಯಲ್ಲಿ ರೂ.87.02 ಕೋಟಿ ವೆಚ್ಚದಲ್ಲಿ 28427 ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.

## ಕೈಮಗ್ಗ ಮತ್ತು ಜವಳಿ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 57.45 | 57.45 | 100 |
| ಟಿ.ಎಸ್.ಪಿ | 23.84 | 23.84 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

<u>**ಪ್ರಮುಖ ಕಾರ್ಯಕ್ರಮಗಳು:**</u>

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ನೇಕಾರರಿಗೆ ವಸತಿ ಕಾರ್ಯಾಗಾರ ನಿರ್ಮಿಸಿಲು ಘಟಕ ವೆಚ್ಚ ರೂ.2.50 ಲಕ್ಷ ನಿಗದಿಪಡಿಸಿದ್ದು, ಸದರಿ ಮೊತ್ತದಲ್ಲಿ ಶೇ.90 ಸಹಾಯಧನ ಹಾಗೂ ಶೇ. 10 ಫಲಾನುಭವಿಗಳ ವಂತಿಕೆಯಿಂದ ಭರಿಸಲಾಗಿದೆ.

- ನೇಕಾರರಿಗೆ ರೂ.30000/- ಘಟಕ ವೆಚ್ಚದಲ್ಲಿ ಕೈಮಗ್ಗ ಹಾಗೂ ಸಲಕರಣೆಗಳ ಸರಬರಾಜು ಮಾಡಲಾಗಿದೆ.
- ವಿದ್ಯುತ್ ಮಗ್ಗಗಳಿಗೆ ಶೇ.90 ರಷ್ಟು ಸಹಾಯಧನ ನೀಡಲಾಗಿದೆ.
- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಉದ್ದಿಮೆದಾರರು ಸ್ಥಾಪಿಸುವ ಸಿದ್ಧ ಉಡುಪು ಘಟಕಗಳಿಗೆ ಸಹಾಯಧನ ನೀಡಲಾಗಿದೆ.

ಕೈಮಗ್ಗ ಮತ್ತು ಜವಳಿ ಇಲಾಖೆಯಲ್ಲಿ ಮತ್ತು ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮದ ವಿವಿಧ ಕಾರ್ಯಕ್ರಮಗಳಲ್ಲಿ 47981 ಪರಿಶಿಷ್ಟ ಜಾತಿ ಮತ್ತು 30780 ಪರಿಶಿಷ್ಟ ಪಂಗಡದ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 79.40 | 79.40 | 100 |
| ಟಿ.ಎಸ್.ಪಿ | 29.26 | 29.26 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಕೆ.ಐ.ಎ.ಡಿ.ಬಿ ಇಂದ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕೈಗಾರಿಕೋದ್ಯಮಿಗಳಿಗೆ ಕೈಗಾರಿಕಾ ಪ್ರದೇಶಗಳಲ್ಲಿ ನಿವೇಶನಗಳಿಗೆ ಶೇ.50 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ. ಅದೇರೀತಿ ಕರ್ನಾಟಕ ಸಣ್ಣ ಕೈಗಾರಿಕೆ ಅಭಿವೃದ್ಧಿ ನಿಗಮದಿಂದ ಕೈಗಾರಿಕಾ ಶೆಡ್‌ಗಳನ್ನು ಶೇ.50 ರಷ್ಟು ರಿಯಾಯಿತಿ ದರದಲ್ಲಿ ನೀಡಲಾಗುತ್ತಿದೆ.

ಭಾರಿ ಮತ್ತು ಮಧ್ಯಮ ಕೈಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 882 ಪರಿಶಿಷ್ಟ ಜಾತಿ ಮತ್ತು 276 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಸಣ್ಣ ಕೈಗಾರಿಕೆ ಇಲಾಖೆ

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 22.37 | 22.19 | 99 |
| ಟಿ.ಎಸ್.ಪಿ | 9.42 | 9.30 | 99 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಕುಶಲ ಕರ್ಮಿಗಳಿಗೆ ಟೂಲ್ ಕಿಟ್ ನೀಡಲಾಗಿದೆ.
- ಸಣ್ಣ ಮತ್ತು ಅತಿ ಸಣ್ಣ ಕೈಗಾರಿಕಾ ಉದ್ಯಮಿದಾರರು ವಸ್ತು ಪ್ರದರ್ಶನಗಳಲ್ಲಿ ಭಾಗವಹಿಸಲು ಧನಸಹಾಯ ಮತ್ತು ತರಬೇತಿ ನೀಡಲಾಗಿದೆ.

ಸಣ್ಣ ಕೈಗಾರಿಕೆ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 4201 ಪರಿಶಿಷ್ಟ ಜಾತಿ ಮತ್ತು 1390 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ನಗರಾಭಿವೃದ್ಧಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 544.86 | 528.54 | 97 |
| ಟಿ.ಎಸ್.ಪಿ | 192.33 | 187.76 | 98 |

- ಒಟ್ಟು ಶೇ.97 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ನಗರ ಸ್ಥಳೀಯ ಸಂಸ್ಥೆಗಳಿಂದ ನಗರಪ್ರದೇಶಗಳಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಜನಸಂಖ್ಯೆ ಹೆಚ್ಚಿರುವ ಜನವಸತಿಗಳಲ್ಲಿ ಮೂಲಭೂತ ಸೌಕರ್ಯ ಒದಗಿಸಲಾಗಿದೆ.
- ಕರ್ನಾಟಕ ನಗರ ನೀರು ಸರಬಾರಾಜು ಮತ್ತು ಒಳಚರಂಡಿ ಮಂಡಳಿ ಮತ್ತು ಬೆಂಗಳೂರು ನಗರ ನೀರು ಸರಬಾರಾಜು ಮತ್ತು ಒಳಚರಂಡಿ ಮಂಡಳಿಯಿಂದ ಕುಡಿಯುವ ನೀರಿನ ಸೌಲಭ್ಯ ಮತ್ತು ಒಳಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಸಲಾಗಿದೆ.
- ಖಾಯಂ ಪೌರಕಾರ್ಮಿಕರಿಗೆ ವಸತಿ ಯೋಜನೆಯಡಿ ತಲಾ ರೂ.6.00 ಲಕ್ಷದಂತೆ ಸಹಾಯಧನ ನೀಡಲಾಗಿದೆ.

## ಲೋಕೋಪಯೋಗಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 724.86 | 536.80 | 74 |
| ಟಿ.ಎಸ್.ಪಿ | 414.80 | 342.29 | 83 |

- ಒಟ್ಟು ಶೇ.78 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ ರೂ.879.09 ಕೋಟಿ ವೆಚ್ಚದಲ್ಲಿ 1103 ಕಿ.ಮೀ ಸಿ.ಸಿ. ರಸ್ತೆ, ಚರಂಡಿ ಕಾಮಗಾರಿಗಳನ್ನು ಅನುಷ್ಠಾನಗೊಳಸಲಾಗಿದೆ.

## ಭಾರಿ ನೀರಾವರಿ ಇಲಾಖೆ

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 1528.07 | 1522.18 | 99 |
| ಟಿ.ಎಸ್.ಪಿ | 414.80 | 342.29 | 93 |

- ಒಟ್ಟು ಶೇ.96 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ರೈತರು ಹೊಂದಿರುವ ಜಮೀನುಗಳಿಗೆ ನೀರಾವರಿ ಸೌಲಭ್ಯಗಳಾದ ಏತ ನೀರಾವರಿ, ತೆರೆದಬಾವಿ, ಕೊಳವೆ ಬಾವಿಗಳನ್ನು ನಿರ್ಮಿಸಲಾಗಿದೆ.

- ಅಚ್ಚುಕಟ್ಟು ಪ್ರದೇಶದ ವ್ಯಾಪ್ತಿಯಲ್ಲಿ ಬರುವ ಪರಿಶಿಷ್ಟ ಜಾತಿ/ಪಂಗಡದ ಕಾಲೋನಿಗಳಲ್ಲಿ ರಸ್ತೆ, ಸಮುದಾಯ ಭವನ ಇತ್ಯಾದಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗಿದೆ.
- ಎಸ್.ಸಿ.ಎಸ್.ಪಿ/ಟಿ.ಎಸ್.ಪಿ ರಡಿ 8309 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

## ಸಣ್ಣ ನೀರಾವರಿ ಇಲಾಖೆ :

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 241.24 | 23.64 | 10 |
| ಟಿ.ಎಸ್.ಪಿ | 102.06 | 19.20 | 9 |

- ಒಟ್ಟು ಶೇ.9.5 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೈತರ ಜಮೀನುಗಳಿಗೆ ವೈಯಕ್ತಿಕ ಮತ್ತು ಸಾಮೂಹಿಕವಾಗಿ ನೀರಾವರಿ ಸೌಲಭ್ಯ ಕಲ್ಪಿಸಲು ಏತ ನೀರಾವರಿ, ತೆರೆದ ಬಾವಿ, ಕೊಳವೆ ಬಾವಿ ಹಾಗೂ ಅಂತರ್ಜಲ ವೃದ್ಧಿಸಲು ಚೆಕ್‌ಡ್ಯಾಂ ಕಾಮಗಾರಿಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ.
- ಸಣ್ಣ ನೀರಾವರಿ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 394 ಹೆಕ್ಟೇರ್ ಪ್ರದೇಶಗಳಿಗೆ ನೀರಾವರಿ ಸೌಲಭ್ಯ ಕಲ್ಪಿಸಲು ಕ್ರಮ ವಹಿಸಲಾಗಿದೆ.

## ವೈದ್ಯಕೀಯ ಶಿಕ್ಷಣ ಇಲಾಖೆ :

(ರೂ.ಕೋಟಿಗಳಲ್ಲಿ)

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 30.25 | 30.13 | 100 |
| ಟಿ.ಎಸ್.ಪಿ | 10.04 | 9.80 | 98 |

- ಒಟ್ಟು ಶೇ.99 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಜಯದೇವ ಹೃದ್ರೋಗ ಸಂಸ್ಥೆ, ಕಿದ್ವಾಯಿ ಮತ್ತಿತರ ಉನ್ನತ ವೈದ್ಯಕೀಯ ಕಾಲೇಜು ಆಸ್ಪತ್ರೆಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ರೋಗಿಗಳಿಗೆ ಚಿಕಿತ್ಸೆ ಹಾಗೂ ಶಸ್ತ್ರ ಚಿಕಿತ್ಸೆಗಾಗಿ ತಗಲುವ ಪೂರ್ಣ ವೆಚ್ಚ ಭರಿಸಲಾಗಿದೆ.
- ವೈದ್ಯಕೀಯ ವಿದ್ಯಾರ್ಥಿಗಳಿಗೆ ಸ್ಟೆತಸ್ಕೋಪ್/ಏಪ್ರಾನ್/ಬಿ.ಪಿ. ಪರೀಕ್ಷೆ ಉಪಕರಣ, ಪಠ್ಯ ಪುಸ್ತಕ, ಆಕರ ಪುಸ್ತಕಗಳನ್ನು ಉಚಿತವಾಗಿ ಒದಗಿಸಲಾಗಿದೆ.
- ಕುಟುಂಬ ವಾರ್ಷಿಕ ವರಮಾನ ರೂ.2.50 ಲಕ್ಷಕ್ಕೆ ಮೇಲ್ಪಟ್ಟು ರೂ.10.00 ಲಕ್ಷಗಳವರೆಗೆ ಇರುವ ವೈದ್ಯಕೀಯ ಹಾಗೂ ದಂತ ವೈದ್ಯಕೀಯ ವ್ಯಾಸಂಗ ಮಾಡುತ್ತಿರುವ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಶುಲ್ಕ ಮರುಪಾವತಿ ಮಾಡಲಾಗಿದೆ.

ವೈದ್ಯಕೀಯ ಶಿಕ್ಷಣ ಇಲಾಖೆಯಲ್ಲಿ ವಿವಿಧ ಕಾರ್ಯಕ್ರಮಗಳಲ್ಲಿ 21186 ಪರಿಶಿಷ್ಟ ಜಾತಿ ಮತ್ತು 7149 ಪರಿಶಿಷ್ಟ ಪಂಗಡ ಫಲಾನುಭವಿಗಳಿಗೆ ಸೌಲಭ್ಯ ಕಲ್ಪಿಸಲಾಗಿದೆ.

## ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ :

**ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 585.05 | 518.30 | 89 |
| ಟಿ.ಎಸ್.ಪಿ | 196.84 | 158.87 | 81 |

- ಒಟ್ಟು ಶೇ.85 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ರಾಷ್ಟ್ರೀಯ ಆರೋಗ್ಯ ಅಭಿಯಾನದಡಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಜನರಿಗೆ ವಿವಿಧ ಸೌಕರ್ಯಗಳನ್ನು ಕಲ್ಪಿಸಲಾಗಿದೆ. ಜನನಿ ಸುರಕ್ಷಾ ಯೋಜನೆ, ರೋಗನಿರೋಧಕ ಲಸಿಕಾ ಕಾರ್ಯಕ್ರಮ, ರಾಷ್ಟ್ರೀಯ ಬಾಲ ಸುರಕ್ಷಾ ಕಾರ್ಯಕ್ರಮ, ಸುವರ್ಣ ಆರೋಗ್ಯ ಚೈತನ್ಯ, ಆರೋಗ್ಯ ಕವಚ ಮತ್ತು ಸಂಚಾರಿ ಆರೋಗ್ಯ ಘಟಕಗಳ ಕಾರ್ಯಕ್ರಮಗಳನ್ನು ಜಾರಿಗೊಳಿಸಲಾಗಿದೆ.
- ಶುಚಿ ಯೋಜನೆಯಡಿ ಒಟ್ಟು 20.53 ಲಕ್ಷ ಮಹಿಳೆಯರಿಗೆ ಸ್ಯಾನಿಟರಿ ಕಿಟ್‌ಗಳನ್ನು ನೀಡಲಾಗಿದೆ.
- ಆರೋಗ್ಯ ಕವಚ 108 ರಡಿ 1.80 ಲಕ್ಷ ಜನರಿಗೆ ಆಂಬ್ಯುಲೆನ್ಸ್ ಸೇವೆ ಒದಗಿಸಲಾಗಿದೆ.
- ಸುವರ್ಣ ಆರೋಗ್ಯ ಸುರಕ್ಷಾ ಯೋಜನೆ, ವಾಜಪೇಯಿ ಆರೋಗ್ಯ ಶ್ರೀ ಚಿಕಿತ್ಸಾ ಯೋಜನೆಯನ್ನು ಎಲ್ಲಾ ಜಿಲ್ಲೆಯ ಬಡತನ ರೇಖೆಗಿಂತ ಕೆಳಗಿರುವ ಜನರಿಗೆ ಉಚಿತ ಚಿಕಿತ್ಸೆ ನೀಡಲಾಗುತ್ತಿದೆ. ಈ ಯೋಜನೆಯಡಿ ಹೃದ್ರೋಗ, ಕ್ಯಾನ್ಸರ್, ನರರೋಗ, ಮೂತ್ರಪಿಂಡ ವೈಫಲ್ಯ, ಸುಟ್ಟ ಗಾಯಗಳು, ಪಾಲಿಟ್ರಾಮಾ ಇತ್ಯಾದಿ ಶಸ್ತ್ರ ಚಿಕಿತ್ಸೆಗಳಿಗೆ 1.50 ಲಕ್ಷ ದಿಂದ 2 ಲಕ್ಷದವರೆಗೆ ನಿಗದಿತ ಆಸ್ಪತ್ರೆಗಳಲ್ಲಿ ಉಚಿತ ಚಿಕಿತ್ಸೆ ನೀಡಲಾಗಿದೆ.
- ಡಯಾಲಿಸಿಸ್ ಘಟಕ ಮತ್ತು ಸುಟ್ಟ ಗಾಯಗಳ ಚಿಕಿತ್ಸಾ ಘಟಕಗಳ ಸ್ಥಾಪನೆ ಮಾಡಲಾಗಿದೆ.
- ಮೀಸಲು ವಿಧಾನಸಭಾ ಕ್ಷೇತ್ರಗಳಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದವರು ಹೆಚ್ಚಿನ ಸಂಖ್ಯೆ ವಾಸಿಸುವ ಸ್ಥಳಗಳಲ್ಲಿ ಉಚಿತ ಆರೋಗ್ಯ ತಪಾಸಣೆ, ಸೂಕ್ತ ಔಷಧಿ ವಿತರಣೆ, ಆರೋಗ್ಯ ಸಂಸ್ಥೆಗಳನ್ನು ಉನ್ನತೀಕರಿಸಿ, ಉಪಕರಣಗಳನ್ನು ಒದಗಿಸಲಾಗಿದೆ. ದಕ್ಷಿಣ ಕನ್ನಡ ಮತ್ತು ಉಡುಪಿ ಜಿಲ್ಲೆಗಳಲ್ಲಿ ಕೊರಗ ಜನಾಂಗದ ಆರೋಗ್ಯ ಸುಧಾರಣೆಗೆ ವಿಶೇಷ ಯೋಜನೆ ರೂಪಿಸಲಾಗಿದೆ.
- ಭಾರತೀಯ ವೈದ್ಯ ಪದ್ಧತಿಯಲ್ಲಿ ಬರುವ ಆಯುಷ್ ಹೋಮಿಯೋಪತಿ, ಯುನಾನಿ, ಪ್ರಕೃತಿ ಚಿಕಿತ್ಸಾ ಇವುಗಳಲ್ಲಿ ಉಚಿತ ಚಿಕಿತ್ಸೆ ಮತ್ತು ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಉಚಿತವಾಗಿ ಲ್ಯಾಪ್‌ಟಾಪ್‌ಗಳನ್ನು ನೀಡಲಾಗುತ್ತಿದೆ.
- ಜನನಿ ಸುರಕ್ಷಾ ಯೋಜನೆಯಡಿಯಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ 100 ಹೆರಿಗೆಗೆ ರೂ.3.00 ಲಕ್ಷ ಆರ್ಥಿಕ ಸಹಾಯ ಮತ್ತು ಹೆರಿಗೆ ಭತ್ಯೆ ರೂ.1000/- ನೀಡಲಾಗಿದೆ.
- ಮೀಸಲು ಕ್ಷೇತ್ರಗಳಲ್ಲಿ ಆಸ್ಪತ್ರೆ ಕಟ್ಟಡಗಳ ದುರಸ್ಥಿ / ಉನ್ನತೀಕರಣ ಕಾಮಗಾರಿ ಅನುಷ್ಠಾನ ಮಾಡಲಾಗಿದೆ.
- ತಾಯಿ ಭಾಗ್ಯ ಯೋಜನೆಯಡಿ ಮಡಿಲು ಕಿಟ್ ವಿತರಣೆ ಹಾಗೂ ಗರ್ಭಿಣಿ ಮಹಿಳೆಯರಿಗೆ ಪೌಷ್ಠಿಕಾಂಶಗಳ ನೆರವು ಪಡೆಯಲು ರೂ.2,000/- ಧನಸಹಾಯ ನೀಡಲಾಗಿದೆ.

## ಕಾರ್ಮಿಕ, ಉದ್ಯೋಗ ಮತ್ತು ತರಬೇತಿ ಇಲಾಖೆ :

**ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 111.79 | 98.28 | 88 |
| ಟಿ.ಎಸ್.ಪಿ | 47.60 | 42.48 | 89 |

- ಒಟ್ಟು ಶೇ. 89 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- 23195 ಪರಿಶಿಷ್ಟ ಜಾತಿ, 9828 ಪರಿಶಿಷ್ಟ ಪಂಗಡದ ಐಟಿಐ ವಿದ್ಯಾರ್ಥಿಗಳಿಗೆ ಟೂಲ್ ಕಿಟ್, ಸಮವಸ್ತ್ರ, ಶೂ, ಪುಸ್ತಕಗಳು, ಬ್ಯಾಗ್, ಟ್ಯಾಬ್ಸ್, ತಾಂತ್ರಿಕ ಪಠ್ಯ ಪುಸ್ತಕಗಳ ಸರಬರಾಜು ಮಾಡಲಾಗಿದೆ.
- ಪ.ಜಾತಿ/ಪ.ಪಂಗಡದ ಬಾಲ ಕಾರ್ಮಿಕರಿಗೆ ರೂ.27.75 ಲಕ್ಷ ವೆಚ್ಚದಲ್ಲಿ ಪುನರ್‌ವಸತಿ ಸೌಲಭ್ಯ ಕಲ್ಪಿಸಲಾಗಿದೆ.
- ಐಟಿಐ ವಿದ್ಯಾರ್ಥಿಗಳಿಗೆ ರೂ.6.79 ಕೋಟಿ ವೆಚ್ಚದಲ್ಲಿ 5 ವಸತಿ ನಿಲಯಗಳ ಕಟ್ಟಡ ನಿರ್ಮಾಣ ಮಾಡಲಾಗಿದೆ.

## ಇಂಧನ ಇಲಾಖೆ :

**ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 146.62 | 146.62 | 100 |
| ಟಿ.ಎಸ್.ಪಿ | 51.60 | 51.60 | 100 |

- ಒಟ್ಟು ಶೇ.100 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಗಂಗಾ ಕಲ್ಯಾಣ ಯೋಜನೆಯಡಿ 13,367 ಕೊರೆದ ಕೊಳವೆಬಾವಿಗಳಿಗೆ ವಿದ್ಯುತ್ ಸಂಪರ್ಕ ಒದಗಿಸಲಾಗಿದೆ.
- ಕುಟೀರ ಜ್ಯೋತಿ ಯೋಜನೆಯಡಿ ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಬಿ.ಪಿ.ಎಲ್. ಕುಟುಂಬಗಳಿಗೆ ಉಚಿತ ವಿದ್ಯುತ್ ಸೌಲಭ್ಯ ಕಲ್ಪಿಸಲಾಗಿದೆ.

## ಕನ್ನಡ ಮತ್ತು ಸಂಸ್ಕೃತಿ ಇಲಾಖೆ :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 47.14 | 44.67 | 95 |
| ಟಿ.ಎಸ್.ಪಿ | 21.26 | 18.88 | 89 |

- ಒಟ್ಟು ಶೇ.92 ಅನುದಾನ ವೆಚ್ಚಮಾಡಲಾಗಿದೆ.

**ಪ್ರಮುಖ ಕಾರ್ಯಕ್ರಮಗಳು:**

- ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡದ ಕಲಾವಿದರಿಗೆ ಪ್ರೋತ್ಸಾಹಧನ ನೀಡಲಾಗಿದೆ.
- ಪ.ಜಾತಿ / ಪ.ಪಂಗಡ ಸಾಂಸ್ಕೃತಿಕ ಸಂಘಗಳಿಗೆ ಧನಸಹಾಯ ನೀಡಲಾಗಿದೆ.
- ಜನಪದ ಉತ್ಸವ ಮತ್ತು ಕಲಾ ಶಿಬಿರಗಳನ್ನು ಏರ್ಪಡಿಸಲಾಗಿದೆ.
- ಬಯಲು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ.
- ಸಾಂಸ್ಕೃತಿಕ ಭವನ ನಿರ್ಮಾಣಕ್ಕೆ ಧನ ಸಹಾಯ ನೀಡಲಾಗಿದೆ.
- ರಾಜ್ಯ ಪತ್ರಾಗಾರ ಘಟಕಕ್ಕೆ, ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಪಿ.ಹೆಚ್.ಡಿ ಇತಿಹಾಸ ಸಂಶೋಧನಾ ವಿದ್ಯಾರ್ಥಿಗಳಿಗೆ ಕಾರ್ಯಾಗಾರ/ವಿಚಾರ ಸಂಕಿರಣ ಏರ್ಪಡಿಸುವುದು ಹಾಗೂ ವಿದ್ಯಾರ್ಥಿಗಳಿಗೆ ಪ್ರೋತ್ಸಾಹಧನ/ ಗೌರವಧನ ನೀಡಲಾಗಿದೆ.
- ಡಾ॥ ಬಿ.ಆರ್. ಅಂಬೇಡ್ಕರ್ ಡಿಬೇಟ್‌ಗಳನ್ನು ಕನ್ನಡಕ್ಕೆ ತುರ್ಜುಮೆ ಮಾಡಿ ಮುದ್ರಿಸಲಾಗುತ್ತಿದೆ.

## ಯೋಜನಾ, ಸಾಂಖ್ಯಿಕ, ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ :

**ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 290.90 | 284.98 | 98 |
| ಟಿ.ಎಸ್.ಪಿ | 128.16 | 124.96 | 98 |

- ಒಟ್ಟು ಶೇ.98 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಹೈದ್ರಾಬಾದ್ ಕರ್ನಾಟಕ ಪ್ರದೇಶಾಭಿವೃದ್ಧಿ ಮಂಡಳಿ, ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿ, ಬಯಲು ಸೀಮೆ ಅಭಿವೃದ್ಧಿ ಮಂಡಳಿ, ಶಾಸಕರ ಕ್ಷೇತ್ರಾಭಿವೃದ್ಧಿ ನಿಧಿ ಅಡಿಯಲ್ಲಿ ಪರಿಶಿಷ್ಟ ಜಾತಿ/ ಪರಿಶಿಷ್ಟ ಪಂಗಡದ ಕಾಲೋನಿಗಳಲ್ಲಿ/ ಪ್ರದೇಶಗಳಲ್ಲಿ ಕಾಂಕ್ರೀಟ್ ರಸ್ತೆ, ಸಮುದಾಯ ಭವನ ನಿರ್ಮಾಣ, ಸಂಪರ್ಕ ರಸ್ತೆ, ಶುದ್ಧ ಕುಡಿಯುವ ನೀರಿನ ಘಟಕ ಅಳವಡಿಕೆ, ಅಂಗನವಾಡಿ ಕೇಂದ್ರ ನಿರ್ಮಾಣ, ಶಾಲೆಗಳಿಗೆ ಕಟ್ಟಡ, ವಿದ್ಯಾರ್ಥಿನಿಲಯಗಳಲ್ಲಿ / ಅಂಗನವಾಡಿ ಕೇಂದ್ರಗಳಲ್ಲಿ ಶೌಚಾಲಯ ನಿರ್ಮಾಣ ಇತ್ಯಾದಿ ಮೂಲಭೂತ ಸೌಕರ್ಯ ಕಲ್ಪಿಸಲಾಗಿದೆ.
- ಎಸ್.ಸಿ.ಎಸ್.ಪಿ./ಟಿ.ಎಸ್.ಪಿ ಯೋಜನೆಯಡಿ 366 ಕಾಮಗಾರಿಗಳನ್ನು ಪೂರ್ಣಗೊಳಿಸಲಾಗಿದೆ.

## ಕಾನೂನು ಇಲಾಖೆ :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 0.76 | 0.00 | 0 |
| ಟಿ.ಎಸ್.ಪಿ | 0.43 | 0.00 | 0 |

- ನಿಗದಿಪಡಿಸಿದ ಅನುದಾನ ವೆಚ್ಚ ಮಾಡಿರುವುದಿಲ್ಲ.

## ಸಮಾಜ ಕಲ್ಯಾಣ ಇಲಾಖೆ:-ಪ.ಜಾತಿ ಮತ್ತು ಪರಿಶಿಷ್ಟ ಪಂಗಡಗಳ ಕಲ್ಯಾಣ ಕಾರ್ಯಕ್ರಮಗಳು :

**(ರೂ.ಕೋಟಿಗಳಲ್ಲಿ)**

| ವರ್ಗ | ಹಂಚಿಕೆ | ವೆಚ್ಚ | ಶೇ |
|---|---|---|---|
| ಎಸ್.ಸಿ.ಎಸ್.ಪಿ | 3481.99 | 3279.15 | 98 |
| ಟಿ.ಎಸ್.ಪಿ | 1089.45 | 1022.61 | 94 |

- ಒಟ್ಟು ಶೇ.94 ಅನುದಾನ ವೆಚ್ಚಮಾಡಲಾಗಿದೆ.

**<u>ಪ್ರಮುಖ ಕಾರ್ಯಕ್ರಮಗಳು:</u>**

- ಮೆಟ್ರಿಕ್ ಪೂರ್ವ ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳ ನಿರ್ವಹಣೆ-ಪ.ಜಾತಿ ವಿದ್ಯಾರ್ಥಿಗಳಿಗೆ 1834 ವಿದ್ಯಾರ್ಥಿನಿಲಯಗಳನ್ನು ಮತ್ತು ಪ.ಪಂ ವಿದ್ಯಾರ್ಥಿಗಳಿಗೆ 374 ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ. ಈ ವಿದ್ಯಾರ್ಥಿನಿಲಯಗಳಲ್ಲಿ 1.79 ಲಕ್ಷ ವಿದ್ಯಾರ್ಥಿಗಳಿಗೆ ಪ್ರವೇಶಾವಕಾಶ ಕಲ್ಪಿಸಲಾಗಿದೆ.
- ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ಮಾಹೆಯಾನ ಭೋಜನಾ ವೆಚ್ಚಕ್ಕಾಗಿ ರೂ. 1300/- ಮತ್ತು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ರೂ.1400/- ಮೊರಾರ್ಜಿ ದೇಸಾಯಿ/ಕಿತ್ತೂರು ರಾಣಿ ಚೆನ್ನಮ್ಮ ವಸತಿ ಶಾಲೆ ವಿದ್ಯಾರ್ಥಿಗಳಿಗೆ ರೂ.1400/- ಗಳನ್ನು ನೀಡಲಾಗಿದೆ.
- 100 ಮೆಟ್ರಿಕ್ ನಂತರ ವಿದ್ಯಾರ್ಥಿನಿಲಯಗಳನ್ನು ಮಂಜೂರು ಮಾಡಲಾಗಿದೆ.

- 125 ಹೊಸ ಮೊರಾರ್ಜಿ ದೇಸಾಯಿ ಮತ್ತಿತರ ವಸತಿ ಶಾಲೆಗಳನ್ನು ಮಂಜೂರು ಮಾಡಲಾಗಿದೆ.
- ವಿಶ್ವವಿದ್ಯಾನಿಲಯ ಹಂತದಲ್ಲಿ 1 ರಿಂದ 5 ನೇ ರ್‍ಯಾಂಕ್ ಪಡೆದ ಸ್ನಾತಕೋತ್ತರ ಪದವಿದಾರರಿಗೆ ರೂ.50,000/- ಪ್ರೋತ್ಸಾಹಧನ ನೀಡಲಾಗಿದೆ.
- ಶುಚಿ ಸಂಭ್ರಮ ಕಿಟ್ (ಸೋಪ್, ಟ್ಯೂತ್ ಪೇಸ್ಟ್, ಹೇರ್ ಆಯಿಲ್ ಇತ್ಯಾದಿ) ಗಳನ್ನು ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ಸಹ ನೀಡಲಾಗಿದೆ.
- ಪ.ಜಾತಿ/ಪ.ಪಂಗಡದ ವಿದ್ಯಾರ್ಥಿಗಳು ಸಿ.ಎ/ಐ.ಸಿ.ಡಬ್ಲ್ಯೂ/ಕಂಪನಿ ಸೆಕ್ರೇಟರಿ ಕೋರ್ಸ್‌ಗಳಲ್ಲಿ ಉತ್ತೀರ್ಣರಾಗಿದ್ದರೆ ರೂ.50000/- ರಿಂದ ರೂ.1.00 ಲಕ್ಷ ಪ್ರೋತ್ಸಾಹಧನ ನೀಡಲಾಗಿದೆ.
- ವಿದ್ಯಾರ್ಥಿನಿಲಯಗಳಲ್ಲಿ ಇಲ್ಲದೇ ಇರುವ ಮೆಟ್ರಿಕ್ ಪೂರ್ವ ವಿದ್ಯಾರ್ಥಿಗಳಿಗೆ ತರಗತಿ ಆಧಾರದಲ್ಲಿ ವಾರ್ಷಿಕ ರೂ.750/- ರಿಂದ ರೂ.1100/- ಡೇ ಸ್ಕಾಲರ್‌ಶಿಪ್ ನೀಡಲಾಗುತ್ತಿದೆ. 10.85 ಲಕ್ಷ ಪ.ಜಾತಿ ವಿದ್ಯಾರ್ಥಿಗಳಿಗೆ ಒಟ್ಟು ರೂ.122.54 ಕೋಟಿ ವೆಚ್ಚದಲ್ಲಿ ಮತ್ತು 3.50 ಲಕ್ಷ ಪರಿಶಿಷ್ಟ ಪಂಗಡ ವಿದ್ಯಾರ್ಥಿಗಳಿಗೆ ರೂ.51.73 ಕೋಟಿ ವೆಚ್ಚದಲ್ಲಿ ಸ್ಕಾಲರ್‌ಶಿಪ್ ನೀಡಲಾಗಿದೆ.
- ಮೆಟ್ರಿಕ್ ನಂತರದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ – 2.92 ಲಕ್ಷ ಪ.ಜಾತಿ ವಿದ್ಯಾರ್ಥಿಗಳಿಗೆ ರೂ.336.82 ಕೋಟಿ ಪರಿಶಿಷ್ಟ ಪಂಗಡ 1.05 ಲಕ್ಷ ವಿದ್ಯಾರ್ಥಿಗಳಿಗೆ ರೂ.110.31 ಕೋಟಿ ವಿದ್ಯಾರ್ಥಿ ವೇತನ ನೀಡಲಾಗಿದೆ.
- ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆಗಳ ಸಂಘ ವತಿಯಿಂದ 363 ವಸತಿ ಶಾಲೆಗಳನ್ನು ಪ.ಜಾತಿ/ಪ.ಪಂ ವಿದ್ಯಾರ್ಥಿಗಳಗಾಗಿ ನಿರ್ವಹಿಸಲಾಗುತ್ತಿದ್ದು, 78,010 ವಿದ್ಯಾರ್ಥಿಗಳು ಪ್ರವೇಶ ಪಡೆದಿರುತ್ತಾರೆ.
- ಪ್ರಥಮ ಬಾರಿಗೆ ಪ್ರಥಮ ದರ್ಜೆಯಲ್ಲಿ ಉತ್ತೀರ್ಣರಾದ ಪಾಲಿಟೆಕ್ನಿಕ್ ಡಿಪ್ಲೋಮ ವಿದ್ಯಾರ್ಥಿಗಳಿಗೆ ರೂ.20000/- ಪ್ರೋತ್ಸಾಹಧನ ನೀಡಲಾಗಿದೆ.
- 87 ಪ.ಜಾತಿ/ಪ.ಪಂಗಡದ ಪದವೀಧರ ಅಭ್ಯರ್ಥಿಗಳನ್ನು ವಿದೇಶಿ ವಿಶ್ವವಿದ್ಯಾಲಯಗಳಲ್ಲಿ ಉನ್ನತ ವ್ಯಾಸಂಗಕ್ಕೆ ನಿಯೋಜಿಸಿ ರೂ.13.82 ಕೋಟಿ ವೆಚ್ಚ ಭರಿಸಲಾಗಿದೆ.
- ಎಸ್.ಎಸ್.ಎಲ್.ಸಿ ಮತ್ತು ಮೆಟ್ರಿಕ್ ನಂತರದ ಕೋರ್ಸ್‌ಗಳಲ್ಲಿ ಪ್ರಥಮ ಬಾರಿಗೆ ಪ್ರಥಮ ಶ್ರೇಣಿಯಲ್ಲಿ ಉತೀರ್ಣರಾದ 1.23 ಲಕ್ಷ ಪ.ಜಾತಿ / ಪ.ಪಂಗಡದ ವಿದ್ಯಾರ್ಥಿಗಳಿಗೆ ಒಟ್ಟು ರೂ.162.51 ಕೋಟಿ ವೆಚ್ಚದಲ್ಲಿ ಪ್ರೋತ್ಸಾಹಧನ ನೀಡಲಾಗಿದೆ.

## II ಮೂಲಭೂತ ಸೌಕರ್ಯಗಳು

- ಪರಿಶಿಷ್ಟ ಜಾತಿ/ ಪ.ಪಂ ಕಾಲೋನಿಗಳಲ್ಲಿ ಸಮುದಾಯ ಭವನಗಳ ನಿರ್ಮಾಣ- ರೂ.100.00 ಕೋಟಿ ಅನುದಾನದಲ್ಲಿ 1927 ಪ.ಜಾತಿ ಸಮುದಾಯ ಭವನಗಳು ಹಾಗೂ ರೂ.26.30 ಕೋಟಿ ಅನುದಾನದಲ್ಲಿ 43 ಪಪಂಗಡ ಸಮುದಾಯ ಭವನಗಳ ನಿರ್ಮಾಣಕ್ಕೆ ಕ್ರಮ ಕೈಗೊಳ್ಳಲಾಗಿದೆ.
- ಪರಿಶಿಷ್ಟ ಜಾತಿಯ/ಪ.ಪಂ ಕಾಲೋನಿಗಳಿಗೆ ಮೂಲಭೂತ ಸೌಕರ್ಯಗಳಿಗೆ ರೂ.243.00 ಕೋಟಿ ಮೊತ್ತ ವಿನಿಯೋಗಿಸಲಾಗಿದೆ.
- ಬೆಂಗಳೂರಿನ ಮಾಗಡಿ ರಸ್ತೆಯಲ್ಲಿರುವ ಭಿಕ್ಷುಕರ ಕೇಂದ್ರದಲ್ಲಿ ಡಾ:ಬಾಬು ಜಗಜೀವನ್‌ರಾಂ ಸಂಶೋಧನಾ ಸಂಸ್ಥೆಯನ್ನು ಸ್ಥಾಪಿಸಲು ಕ್ರಮ ವಹಿಸಲಾಗುತ್ತಿದೆ.
- ಪ.ಜಾತಿ / ಪ.ಪಂಗಡದ 69 ವಿದ್ಯಾರ್ಥಿನಿಲಯಗಳ ಕಟ್ಟಡಗಳ ನಿರ್ಮಾಣಕ್ಕೆ ರೂ.103.20 ಕೋಟಿ ವೆಚ್ಚ ಮಾಡಲಾಗಿದೆ. 343 ವಿದ್ಯಾರ್ಥಿನಿಲಯಗಳ ಕಟ್ಟಡಗಳನ್ನು ರೂ. 122.74 ಕೋಟಿ ವೆಚ್ಚದಲ್ಲಿ ದುರಸ್ಥಿ ಮಾಡಲಾಗಿದೆ.

## III ತರಬೇತಿ ಕಾರ್ಯಕ್ರಮ

- ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ – 3380 ಅಭ್ಯರ್ಥಿಗಳಿಗೆ ತರಬೇತಿ ನೀಡಲು ರೂ.32.04 ಕೋಟಿ ವೆಚ್ಚ ಭರಿಸಲಾಗಿದೆ.

## IV ಅಂತರ್ಜಾತಿ ವಿವಾಹಕ್ಕೆ ಪ್ರೋತ್ಸಾಹಧನ

- ಅಂತರ್‌ಜಾತಿ ವಿವಾಹವಾದ 2145 ಪರಿಶಿಷ್ಟ ಜಾತಿ ದಂಪತಿಗಳಿಗೆ ರೂ.18.63 ಕೋಟಿ ವೆಚ್ಚದಲ್ಲಿ ಪ್ರೋತ್ಸಾಹಧನ ನೀಡಲಾಗಿದೆ.

## V. ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳು

- ಕರ್ನಾಟಕ ರಾಜ್ಯ ಹಣಕಾಸು ನಿಗಮದಿಂದ ಶೇ.4 ಬಡ್ಡಿ ಸಹಾಯಧನ ಯೋಜನೆಯಡಿ 221 ಪ.ಜಾತಿ ಹಾಗೂ 102 ಪ.ಪಂಗಡ ಫಲಾನುಭವಿಗಳಿಗೆ ಒಟ್ಟು ರೂ.36.14 ಕೋಟಿ ಬಡ್ಡಿಸಹಾಯಧನ ನೀಡಲಾಗಿದೆ.
- ಭೂ ಒಡೆತನ ಯೋಜನೆಯಡಿಯಲ್ಲಿ ಪ.ಜಾತಿ/ಪ.ಪಂಗಡ ಭೂ ರಹಿತ ಕೃಷಿ ಕಾರ್ಮಿಕರಿಗೆ ಕೃಷಿ ಭೂಮಿಯನ್ನು ಖರೀದಿಸಿ ನೀಡಲಾಗುತ್ತಿದೆ – ಘಟಕ ವೆಚ್ಚ ರೂ.10.00. ಲಕ್ಷ (ಶೇ.50 ಸಾಲ ಮತ್ತು ಶೇ.50 ಸಹಾಯಧನ).
- ಪ.ಜಾತಿ ಅಭ್ಯರ್ಥಿಗಳಿಗೆ ಆರ್ಥಿಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಮತ್ತು ಪ.ಪಂಗಡ ಅಭ್ಯರ್ಥಿಗಳಿಗೆ ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಗಳಿಂದ ಅನುಷ್ಠಾನಗೊಳಿಸಲಾಗುತ್ತಿದೆ.
- ಸಾಲ ಮನ್ನಾ ಯೋಜನೆಯಡಿ ಒದಗಿಸಲಾದ ಅನುದಾನವನ್ನು ಭಾರತ ಸರ್ಕಾರದ ರಾಷ್ಟ್ರೀಯ ಪ.ಜಾತಿ/ಪ.ಪಂಗಡದ ಅಭಿವೃದ್ಧಿ ನಿಗಮಗಳಿಂದ ಪಡೆದ ಸಾಲದ ಮರುಪಾವತಿಗೆ ಉಪಯೋಗಿಸಲಾಗುತ್ತದೆ.
- ಷೇರು ಬಂಡವಾಳ ಅನುದಾನವನ್ನು ಫಲಾನುಭವಿಗಳಿಗೆ ಸಾಲ/ಅಂಚಿನ ಹಣ ನೀಡಲು ಉಪಯೋಗಿಸಲಾಗುತ್ತದೆ.
- ಸ್ವಯಂ ಉದ್ಯೋಗ ಕಾರ್ಯಕ್ರಮಗಳಲ್ಲಿ ಸಹಾಯಧನ ಗರಿಷ್ಠ ರೂ.5.00 ಲಕ್ಷವರೆಗೆ ನೀಡಲಾಗುತ್ತಿದ್ದು, ಮತ್ತು ಸಾಲವನ್ನು ಬ್ಯಾಂಕ್ ಮೂಲಕ ಪಡೆಯಲಾಗುತ್ತಿದೆ.

### ಡಾ: ಬಿ.ಆರ್ ಅಂಬೇಡ್ಕರ್ ಅಭಿವೃದ್ಧಿ ನಿಗಮ

ಡಾ:.ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಪ.ಜಾತಿ ಫಲಾನುಭವಿಗಳಿಗೆ ಮತ್ತು ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದಿ ನಿಗಮಗಳಿಂದ ಪ.ಪಂಗಡದ ಫಲಾನುಭವಿಗಳಿಗೆ ಸಾಲ ಮತ್ತು ಸಹಾಯಧನ ನೀಡಲಾಗುತ್ತಿದ್ದು, ವಿವರ ಈ ಕೆಳಕಂಡಂತಿದೆ.

(ರೂ.ಕೋಟಿಗಳಲ್ಲಿ)

| ಕ್ರ.ಸಂ | ಕಾರ್ಯಕ್ರಮ | ಹಂಚಿಕೆ | ವೆಚ್ಚ | ಭೌತಿಕ ಸಾಧನೆ |
|---|---|---|---|---|
| 1. | ಗಂಗಾ ಕಲ್ಯಾಣ | 237.20 | 237.20 | 10980 |
| 2. | ಸ್ವಯಂ ಉದ್ಯೋಗ | 113.80 | 113.80 | 22172 |
| 3. | ಸಾಲಮನ್ನಾ | 106.00 | 106.00 | – |
| 4. | ಕಿರು ಸಾಲ ಯೋಜನೆ | 40.00 | 40.00 | 19376 |
| 5 | ಷೇರು ಬಂಡವಾಳ | 90.00 | 45.90 | ಕೇಂದ್ರ ಸರ್ಕಾರದಿಂದ ರೂ.44.10 ಕೋಟಿ ಬಿಡುಗಡೆಯಾಗಿರುವುದಿಲ್ಲ |
| | **ಒಟ್ಟು** | **587.00** | **542.90** | **52528** |

## ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮ

(ರೂ.ಕೋಟಿಗಳಲ್ಲಿ)

| ಕ್ರ.ಸಂ. | ಕಾರ್ಯಕ್ರಮ | ಹಂಚಿಕೆ | ವೆಚ್ಚದ ಮೊತ್ತ | ಭೌತಿಕ ಸಾಧನೆ |
|---|---|---|---|---|
| 1 | ಗಂಗಾ ಕಲ್ಯಾಣ | 130.00 | 130.00 | 5583 |
| 2 | ಸ್ವಯಂ ಉದ್ಯೋಗ | 73.80 | 73.80 | 4828 |
| 3 | ಷೇರು ಬಂಡವಾಳ | 2.00 | 2.00 | – |
| 4 | ಕಿರು ಸಾಲ ಯೋಜನೆ | 11.00 | 11.00 | 9000 |
| 5 | ಸಾಲ ಮನ್ನಾ | 30.51 | 30.51 | – |
| | **ಒಟ್ಟು** | **247.31** | **247.31** | **19411** |

### ಡಾ: ಬಾಬು ಜಗಜೀವನ್ ರಾಂ ಚರ್ಮ ಕೈಗಾರಿಕಾ ಅಭಿವೃದ್ಧಿ ನಿಗಮ ನಿಯಮಿತ

ಮೇಲ್ಕಂಡ ನಿಗಮದಿಂದ ಚರ್ಮ ಕುಶಲಕರ್ಮಿಗಳಿಗೆ ಸಾಲ ಸೌಲಭ್ಯ, ತರಬೇತಿ, ಟೂಲ್‌ಕಿಟ್, ಮಾರಾಟ ಕುಠೀರ ಮತ್ತು ಮನೆಗಳ ನಿರ್ಮಾಣ ಕಾರ್ಯಕ್ರಮಗಳನ್ನು ಅನುಷ್ಠಾನಗೊಳಸಲಾಗುತ್ತಿದೆ. ವಸತಿ ಮತ್ತು ಕಾರ್ಯಾಗಾರ ನಿರ್ಮಾಣ, ರಸ್ತೆ ಬದಿ ಕುಠೀರಗಳ ವಿತರಣೆ ತರಬೇತಿ ಕಾರ್ಯಕ್ರಮಗಳು ಇತ್ಯಾದಿಗಳಿಗೆ ರೂ.50.00 ಕೋಟಿ ಅನುದಾನ ಒದಗಿಸಲಾಗಿದೆ. 6858 ಚರ್ಮ ಕುಶಲ ಕರ್ಮಿಗಳಿಗೆ ಸೌಲಭ್ಯ ಒದಗಿಸಲಾಗಿದೆ.

### ಕರ್ನಾಟಕ ತಾಂಡ ಅಭಿವೃದ್ಧಿ ನಿಗಮ

ಕರ್ನಾಟಕ ತಾಂಡ ಅಭಿವೃದ್ಧಿ ನಿಗಮದಿಂದ ಬಂಜಾರ ತಾಂಡಗಳಲ್ಲಿ ಮೂಲಭೂತ ಸೌಕರ್ಯಗಳನ್ನು ಒದಗಿಸಲಾಗುತ್ತಿದೆ.

2016–17 ನೇ ಸಾಲಿನಲ್ಲಿ ಬಂಜಾರ ಸಮುದಾಯದ ಅಭಿವೃದ್ಧಿಗಾಗಿ ತಾಂಡ ಅಭಿವೃದ್ಧಿ ನಿಗಮಕ್ಕೆ ರೂ.90.00 ಕೋಟಿಗಳನ್ನು ನೀಡಲಾಗಿದೆ. ತಾಂಡಗಳಲ್ಲಿ 159 ಸೇವಾಲಾಲ್/ಬಂಜಾರ ಸಮುದಾಯ ಭವನಗಳನ್ನು, 319 ತಾಂಡಗಳಲ್ಲಿ ಸಿ.ಸಿ.ರಸ್ತೆ, ಚರಂಡಿ ಕಾಮಗಾರಿ, 20 ಸಂಪರ್ಕ ರಸ್ತೆ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳಲಾಗಿದೆ.

**ಕರ್ನಾಟಕ ಭೋವಿ ಅಭಿವೃದ್ಧಿ ನಿಗಮ–** ಡಾ: ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಸಲಾಗುತ್ತಿರುವ ಎಲ್ಲಾ ಯೋಜನೆಗಳನ್ನು ಕರ್ನಾಟಕ ಬೋವಿ ಅಭಿವೃದ್ಧಿ ನಿಗಮಕ್ಕೆ ವಿಸ್ತರಿಸಲಾಗಿದೆ. ಅದರೆ ಜೊತೆಗೆ 2016–17 ನೇ ಸಾಲಿನಲ್ಲಿ ಪ್ರತ್ಯೇಕವಾಗಿ ರೂ.25.00 ಕೋಟಿಗಳನ್ನು ವಿವಿಧ ಕಾರ್ಯಕ್ರಮಗಳಿಗೆ ಒದಗಿಸಲಾಗಿದೆ.

**ಕರ್ನಾಟಕ ಸಫಾಯಿ ಕರ್ಮಚಾರಿ ಅಭಿವೃದ್ಧಿ** ನಿಗಮಕ್ಕೆ 2016–17 ನೇ ಸಾಲಿನಲ್ಲಿ ರೂ.30.00 ಕೋಟಿ ಒದಗಿಸಲಾಗಿದೆ. ಸಫಾಯಿ ಕರ್ಮಾಚಾರಿಗಳಿಗೆ/ಅವರ ಅವಲಂಬಿತರಿಗೆ ಸ್ವಯಂ ಉದ್ಯೋಗಕ್ಕಾಗಿ ಡಾ:ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮದಿಂದ ಅನುಷ್ಠಾನಗೊಳಸಲಾಗುತ್ತಿರುವ ಯೋಜನೆಗಳನ್ನು ಅಳವಡಿಸಿಕೊಂಡು ಸೌಲಭ್ಯ ಒದಗಿಸಲಾಗುತ್ತಿದೆ.

*******